ಜನಶಕ್ತಿ

ಪ್ರಗತಿಶೀಲ ಕನ್ನಡ ವಾರಪತ್ರಿಕೆ
ಸಂಪುಟ 6 ಸಂಚಿಕೆ 37
೧೩ ಜುಲೈ ೧೯೫೮
★
ಪುಟ ೧೦ ಬೆಲೆ: ೧೩ ನಯೇ ಪೈಸೆ

★

ಭೂಸುಧಾರಣಾ ಶಾಸನದ ಬಗ್ಗೆ ಜತ್ತಿಯವರ ವಿಳಂಬ ನೀತಿ!

ರಾಜ್ಯದ ಜನತೆಯನ್ನು ಬಾಧಿಸುವ ಪ್ರಶ್ನೆಗಳು — ಜತ್ತಿಯವರ ದೃಷ್ಟಿಕೋಣ

ಮೈಸೂರಿನ ಮುಖ್ಯ ಮಂತ್ರಿ ಶ್ರೀ ಬಿ. ಡಿ. ಜತ್ತಿಯವರು ತಾ. 8ರಂದು ಬೊಂಬಾಯಿಯಲ್ಲಿ ಮಾತನಾಡುತ್ತಾ ಹಲವು ಪ್ರಶ್ನೆಗಳ ಬಗ್ಗೆ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಮೈಸೂರು-ಮುಂಬಯಿ ಗಡಿ ಸಮಸ್ಯೆಯನ್ನು ಚರ್ಚಿಸಲು ಹೋದ ಜತ್ತಿಯವರು ಮುಂಬೈಯಲ್ಲಿ ಭೂಸುಧಾರಣಾ ಶಾಸನ, ಹಿಂದಿ ಮಾಧ್ಯಮ ಮುಂತಾದ ಪ್ರಶ್ನೆಗಳ ಬಗ್ಗೆ ಮಾತನಾಡಿ ರಾಜ್ಯದ ಜನತೆಯೊಳಗೆ ಗೊಂದಲವನ್ನುಂಟು ಮಾಡಿದ್ದಾರೆ.

ವಿಳಂಬ ನೀತಿಯ ಹಿನ್ನಲೆ

ಭೂಸುಧಾರಣಾ ಶಾಸನದ ಬಗ್ಗೆ ಮಾತನಾಡುತ್ತಾ ರಾಜ್ಯದ ವಿವಿಧ ಪ್ರದೇಶಗಳಲ್ಲಿದ್ದ ಶಾಸನಗಳನ್ನು ಒಂದುಗೂಡಿಸಿ ಒಂದೇ ರೀತಿಯ ಗೇಣಿ ಶಾಸನವನ್ನು ಜಾರಿಗೆ ತರಲು ಕ್ರಮ ಕೈಗೊಳ್ಳಲಾಗಿಯೆದೆಂದು ತಿಳಿಸಿದ್ದಾರೆ. ಕರಡು ಶಾಸನವು ಪ್ರದೇಶ ಕಾಂಗ್ರೆಸ್ ಸಂಸ್ಥೆಯಲ್ಲಿ ಚರ್ಚೆಯಾಗಿ ಅದರ ನಂತರ ಮಂತ್ರಿ ಮಂಡಲದಲ್ಲಿ ಚರ್ಚೆಯಾಗಿ ಅಸೆಂಬ್ಲಿ ಮುಂದೆ ತರಲಾಗುವುದೆಂದು ತಿಳಿಸಿದ್ದಾರೆ ಇದೇ ಅಭಿಪ್ರಾಯವನ್ನು ಅವರು ಹಿಂದೆ ಸಹ ವ್ಯಕ್ತಪಡಿಸಿರುವುದು ಎಲ್ಲರಿಗೂ ತಿಳಿದ ವಿಷಯವೇ ಆಗಿದೆ. ಅದರೆ ಈ ಶಾಸನ ಯಾವಾಗ ಬರುವುದೆಂಬುದೇ ಪ್ರಶ್ನೆಯಾಗಿದೆ. ಅದಕ್ಕೆಷ್ಟು ಕಾಲಬೇಕೆಂದು ಮುಖ್ಯ ಮಂತ್ರಿಯವರು ತಿಳಿಸಿಲ್ಲ. ಇಂಥ ಮುಖ್ಯ ಪ್ರಶ್ನೆಯ ಬಗ್ಗೆ ಹೀಗೆ ವಿಲಂಬ ಮಾಡುವುದು ಯೋಗ್ಯವೇ ? ರಾಜ್ಯಪುನರ್‌ರಚನೆಯಾಗಿ 21 ತಿಂಗಳಾಗುತ್ತಾ ಬಂತು. ಶ್ರೀ ಜತ್ತಿಯವರ ಅಧ್ಯಕ್ಷತೆಯಲ್ಲಿ ರಚನೆಯಾದ ಸಮಿತಿಯ ವರದಿಯು ಪ್ರಕಟವಾಗಿ 10 ತಿಂಗಳಾದುವು. ಶಾಸನ ಸಭೆಯಲ್ಲೂ, ವಿಧಾನ ಪರಿಷತ್ತಿನಲ್ಲೂ ಸಾಕಷ್ಟು ಚರ್ಚೆಯೂ ನಡೆದಿದೆ. ಹಿಂದಿನ ನಿಜಲಿಂಗಪ್ಪನವರ ಮಂತ್ರಿ ಮಂಡಲವೇ ಕರಡು ಶಾಸನವನ್ನು ತಯಾರು ಮಾಡಿದೆಯೆಂಬ ವದಂತಿಯೂ ಇದೆ. ಈ ಪರಿಸ್ಥಿತಿಯಲ್ಲಿ ಶಾಸನವನ್ನು ತರಲು ವಿಳಂಬ ಮಾಡುವುದೆಂದರೆ ಜನತೆಗೆ ದ್ರೋಹ ಬಗೆದಂತಾಗುವುದೆಂದು ನಾವು ಹೇಳಲಿಚ್ಛಿಸುತ್ತೇವೆ. ಮಾನ್ಯ ಜತ್ತಿಯವರು ಅನುಸರಿಸುತ್ತಿರುವ ನೀತಿಯನ್ನು ನೋಡಿದರೆ ಭೂಸುಧಾರಣಾ ಶಾಸನ ಒಂದು ವೇಳೆ ಬಂದರೂ ಅದು ತೀರಾ ಪ್ರತಿಗಾಮಿಯಾಗಿದ್ದು ರೈತರಿಗೆ ಅನುಕೂಲ ಮಾಡುವ ಬದಲು ಜಮೀನ್ದಾರರಿಗೆನೇ ಹಿತಮಾಡುವುದೆಂಬ ಭಯವೂ ಅನೇಕರಲ್ಲಿ ಮೂಡಿದೆ. ನಮ್ಮ ರಾಜ್ಯದ ಯಾವುದೇ ಭಾಗದಲ್ಲಿ ರೈತರಿಗೀಗ ದೊರೆಯುತ್ತಿರುವ ಸವಲತ್ತುಗಳಿಗೆ ಹೊಸ ಶಾಸನ ಯಾವುದೇ ಧಕ್ಕೆ ತರುವುದಿಲ್ಲವೆಂಬ ಆಶ್ವಾಸನೆ ಅಗತ್ಯ.

ಈ ಸಂಧಿಕಾಲದಲ್ಲಿ ಜನತೆಯ ಮೇಲೆ ದೊಡ್ಡ ಜವಾಬ್ದಾರಿ ಬಿದ್ದಿದೆ. ಯೋಗ್ಯವಾದ ಮತ್ತು ನಿಜವಾಗಿ ಪ್ರಗತಿಗಾಮಿಯಾದ ರೈತರ ಹಿತ ರಕ್ಷಿಸುವ ಶಾಸನ ಕೂಡಲೇ ತರುವಂತೆ ಎಲ್ಲ ಪ್ರಜಾಪ್ರಭುತ್ವ ಶಕ್ತಿಗಳೂ ಪಕ್ಷಗಳೂ ಒತ್ತಾಯ ತರುವುದು ಬಹಳ ಆಗತ್ಯ. ಮುಖ್ಯ ಮಂತ್ರಿ ಸ್ಥಾನದ ವ್ಯಾಮೋಹದಿಂದ ಶ್ರೀ ಜತ್ತಿಯವರು ಕಾಲ ತಳ್ಳಲು ಹಂಬಲಿಸುತ್ತಿರಬಹುದು. ಆದರೆ ನಮ್ಮ ರಾಜ್ಯದ ಜನತೆ ಮಾತ್ರ ಅದನ್ನೆಂದೂ ಸಹಿಸದೆಂದು ನಾವು ಎಚ್ಚರಿಕೆ ಕೊಡಬಯಸುತ್ತೇವೆ.

ನಾಚಿಕೆಗೇಡು

ಹಿಂದಿ ಭಾಷೆಯನ್ನು ರಾಷ್ಟ್ರ ಭಾಷೆಯನ್ನಾಗಿ ಅಂಗೀಕರಿಸುವುದಕ್ಕೆ ಇಲ್ಲವೇ ಮೈಸೂರು ರಾಜ್ಯದಲ್ಲಿ ವಿರೋಧವಿರುವುದಿಲ್ಲವೆನ್ನುವುದು ತಮ್ಮ ಅಭಿಪ್ರಾಯವೆಂದು ಶ್ರೀ ಜತ್ತಿಯವರು ತಿಳಿಸಿರುವುದು ತುಂಬಾ ಆಶ್ಚರ್ಯಕರವಾಗಿದೆ. ಮುಖ್ಯ ಮಂತ್ರಿಯವರು ಈ ಸಮಸ್ಯೆಯ ಬಗ್ಗೆ ಜನತೆಯ ಅಭಿಪ್ರಾಯವನ್ನು ಹೇಗೆ ತಿಳಿದುಕೊಂಡರೋ ನಮಗೆ ಗೊತ್ತಿಲ್ಲ. ಹಿಂದಿಯನ್ನು ನಮ್ಮ ರಾಜ್ಯದಲ್ಲಿ ಶಿಕ್ಷಣ ಮಾಧ್ಯಮವನ್ನಾಗಿ ಮಾಡುವುದನ್ನು ಕನ್ನಡಿಗರು ಪ್ರತಿಭಟಿಸುವುದು ಮಾತ್ರ ಖಂಡಿತ. ನಮ್ಮ ರಾಜ್ಯದಲ್ಲಿ ಶಿಕ್ಷಣ ಮಾಧ್ಯಮ ಕನ್ನಡವೇ ಆಗಬೇಕೆಂದು ಎಲ್ಲರಿಂದಲೂ ಒತ್ತಾಯ ಬಂದಿದೆ. ಮೈಸೂರು ವಿಶ್ವವಿದ್ಯಾಲಯದ ಉಪಕುಲಪತಿಯಾದ ಕೆ.ವಿ. ಪುಟ್ಟಪ್ಪನವರು ಇದಕ್ಕೋಸ್ಕರ ಸತತ ದುಡಿಯುತ್ತಿದ್ದಾರೆ. ಸಾಹಿತ್ಯ ಪರಿಷತ್ತಿನವರು ಹಿಂದಿನಿಂದಲೂ ಒತ್ತಾಯ ತರುತ್ತಿದ್ದಾರೆ. ಕಮ್ಯೂನಿಸ್ಟ್ ಪಾರ್ಟಿ ಮತ್ತಿತರ ಪುರೋಗಾಮಿಗಳು ಕನ್ನಡ ಮಾಧ್ಯಮವಾಗಬೇಕೆಂದು ಹೋರಾಡುತ್ತಿದ್ದಾರೆ. ಕರ್ನಾಟಕ ಪ್ರಾಂತ ರಚನೆಗೆ ಜನ ಹೋರಾಡಿದಾಗ ಅತ್ಯುನ್ನತ ಮಟ್ಟದವರೆಗೂ ಕನ್ನಡದಲ್ಲೇ ಶಿಕ್ಷಣ ದೊರೆಯುವುದೆಂದೂ ಕನ್ನಡ ಭಾಷೆಗೆ ಪ್ರಾಧಾನ್ಯತೆ ದೊರೆಯುವುದೆಂದೂ ನಂಬಿದ್ದ ಜನತೆ ಜತ್ತಿಯವರ ಅಭಿಪ್ರಾಯವನ್ನೆಂದೂ ಮಾನ್ಯಮಾಡಲಿಕ್ಕಿಲ್ಲ. ಹಿಂದಿಯ ಬಗ್ಗೆ ದ್ವೇಷದಿಂದಾಗಲಿ ಅಥವಾ ಕನ್ನಡ ಭಾಷೆಯ ಮೇಲಿನ ದುರಭಿಮಾನದಿಂದಾಗಲೀ ನಾವು ಇದನ್ನು ಹೇಳುತ್ತಿಲ್ಲ. ಆದರೆ ಪ್ರತಿ ಪ್ರಾಂತದಲ್ಲೂ ಆಯಾ ಪ್ರಾಂತದ ಭಾಷೆ ಆಡಳಿತ ಭಾಷೆಯಾಗಬೇಕೆಂದು, ಶಿಕ್ಷಣ ಮಾಧ್ಯಮವಾಗಬೇಕೆಂದು ಪ್ರಜಾಪ್ರಭುತ್ವವಾದಿಗಳೆಲ್ಲರ ಅಭಿಪ್ರಾಯವಿರುತ್ತದೆ.

ಎನ್. ಎಲ್. ಉಪಾಧ್ಯಾಯ

ಕನ್ನಡ ನಾಡಿನ ಮುಖ್ಯಮಂತ್ರಿಯಾಗಿರುವ ಜತ್ತಿಯವರು ಹಿಂದೀ ಶಿಕ್ಷಣ ಮಾಧ್ಯಮವಾಗಬಹುದೆಂದು ಹೇಳಿರುವುದು ನಾಚಿಕೆಗೇಡಾಗಿದೆ. ನಮ್ಮ ನಾಡಿನ ಜನತೆ ಅದನ್ನು ತೀವ್ರವಾಗಿ ಖಂಡಿಸಬೇಕಾಗಿದೆ. ನಾಡಿನ ಏಳಿಗೆಗೆ, ಭಾಷೆಯ ಅಭಿವೃದ್ಧಿಗೆ, ಜನತೆಯ ಬಯಕೆಗೆ ಕನ್ನಡವೇ ಶಿಕ್ಷಣದ ಎಲ್ಲ ಘಟ್ಟಗಳಲ್ಲೂ ಮಾಧ್ಯಮವಾಗಿರುವುದು ಅತ್ಯಗತ್ಯ.

ಮೈಸೂರು-ಮುಂಬೈ ಗಡಿವಿವಾದವನ್ನು ಪಶ್ಚಿಮವಲಯ ಸಮಿತಿಗೊಪ್ಪಿಸಬೇಕೆಂದು ಮೈಸೂರು ಮತ್ತು ಮುಂಬೈ ಮುಖ್ಯ ಮಂತ್ರಿಗಳು ತೀರ್ಮಾನಿಸಿದ್ದಾರೆಂದು ವರದಿಯಾಗಿದೆ. ಪರಸ್ಪರ ಸಂಧಾನದ ಮೂಲಕ ಈ ಪ್ರಶ್ನೆಯನ್ನು ಸಮಾಧಾನಕರವಾಗಿ ಬಿಡಿಸಲು ಅವರಿಗೆ ಸಾಧ್ಯವಾಗಲಿಲ್ಲ. ವಲಯ ಸಮಿತಿಗೆ ಈ ಸಮಸ್ಯೆಯನ್ನೊಪ್ಪಿಸಿದ್ದನ್ನು ನಾವು ಸ್ವಾಗತ ಮಾಡುತ್ತೇವೆ. ಈ ಪ್ರಶ್ನೆ ಬೇಗನೇ ಬಗೆಹರಿಯಲೆಂದು ನಮ್ಮ ಹಾರೈಕೆ.

ಗಡಿ ಸಮಸ್ಯೆ

ನಡೆದ ಮಾತುಕತೆಯಲ್ಲಿ ಮುಖ್ಯ ಮಂತ್ರಿಗಳೊಳಗೆ ಸಮಸ್ಯೆಯನ್ನು ಬಗೆಹರಿಸುವ ರೀತಿಯ ಬಗ್ಗೆ ಭಿನ್ನಾಭಿಪ್ರಾಯ ತಲೆಯೆತ್ತಿದೆಯೆಂದು ವರದಿಯಾಗಿದೆ. ಗ್ರಾಮವನ್ನು ಘಟಕವಾಗಿಟ್ಟುಕೊಂಡು ಗಡಿ ವಿವಾದವನ್ನು ಬಗೆಹರಿಸಲು ಮುಂಬೈ ಸರಕಾರ ಸೂಚಿಸಿದ ಮಾರ್ಗವನ್ನು ಜತ್ತಿಯವರು ತಿರಸ್ಕರಿಸಿದ್ದಾರೆ. ಆಂಧ್ರ-ಮದ್ರಾಸ್ ರಾಜ್ಯಗಳು ನಡುವೆ ಗಡಿವಿವಾದ ಬಂದಾಗ ಪಾಟಸ್ಕರ್ ಅವರು ವಿಚಾರಣೆ ನಡಿಸಿ ಗ್ರಾಮ ಘಟಕದ ಆಧಾರದ ಮೇಲೆ ತೀರ್ಪುಗೊಟ್ಟು ಸಮಸ್ಯೆಯನ್ನು ಬಗೆಹರಿಸಿದ್ದಾರೆ.

ರಾಜ್ಯಗಳ ಪುನರ್‌ರಚನೆಯಾದಾಗ ಗಡಿ ಸಮಸ್ಯೆಯ ಬಗ್ಗೆ ಸಾಕಷ್ಟು ಗಮನ ಕೊಡದ್ದರಿಂದ ಹಲವು ವಿವಾದಗಳು ತಲೆ ಎತ್ತಿವೆ ನಮ್ಮಲ್ಲಿ ಇದು ಬೃಹತ್ ಸಮಸ್ಯೆಯಾಗಿ ಬಂತು. ಒಂದು ಕಡೆ ಅಚ್ಚ ಕನ್ನಡ ಭಾಗಗಳನ್ನು ಇತರ ನೆರೆ ಪ್ರಾಂತಗಳಲ್ಲಿ ಸೇರಿಸಲಾಗಿತ್ತು. ಮತ್ತು ಕನ್ನಡೇತರ ಭಾಗಗಳನ್ನು ಮೈಸೂರಿಗೆ ಜೋಡಿಸಲಾಗಿತ್ತು. ಇದರಿಂದಾಗಿ ಬೆಳಗಾಂವಿಯ ಮರಾಠಿ ಪ್ರದೇಶದಲ್ಲೂ, ಕಾಸರಗೋಡಿನ ಕನ್ನಡ ಭಾಗದಲ್ಲೂ ಹೋರಾಟಗಳೂ ನಡೆದುವು. ಇದಕ್ಕೆ ಕೇಂದ್ರ ಸರಕಾರವೇ ಕಾರಣವಾಗಿತ್ತು.

ಗಡಿ ಪ್ರಶ್ನೆಯನ್ನು ಸಮರ್ಪಕವಾಗಿ ಬಗೆಹರಿಸಬೇಕಾದರೆ ಒಂದು ತತ್ವವನ್ನು ಆಧಾರವಾಗಿಟ್ಟುಕೊಳ್ಳುವುದಗತ್ಯವೆಂದು ಕಮ್ಯೂನಿಸ್ಟ್ ಪಾರ್ಟಿ ಒತ್ತಾಯಪಡಿಸಿರುತ್ತದೆ. ಬಹುಸಂಖ್ಯಾತ ಕನ್ನಡ ಭಾಗಗಳು ನಮ್ಮ ರಾಜ್ಯಕ್ಕೆ ಬರಲೇಬೇಕೆಂದು ಹೋರಾಡುವಾಗ ಕನ್ನಡೇತರ ಭಾಗಗಳನ್ನು ಬಿಟ್ಟುಕೊಡುವುದಿಲ್ಲವೆಂದು ಹೇಳುವುದು ಯೋಗ್ಯವಾಗಲಾರದು. ಅದರಿಂದ ಹೊರಗಿರುವ ಕನ್ನಡ ಭಾಗಗಳು ನಮಗೆ ದೊರೆಯುವುದೇ ದುರ್ಲಭವಾಗುವುದು. ಕಾಸರಗೋಡು, ಜತ್ತ್, ಅಕ್ಕಲಕೋಟೆ, ಸೊಲ್ಲಾಪುರ, ಮಡಕಸಿರ ಮುಂತಾದ ಕಡೆಗಳಲ್ಲಿರುವ ನಮ್ಮ ರಾಜ್ಯಕ್ಕೆ ಅಂಟಿಕೊಂಡಿರುವ ಕನ್ನಡ ಬಹುಸಂಖ್ಯಾತ ಪ್ರದೇಶಗಳು ನಮ್ಮ ನಾಡಿಗೆ ಸೇರುವಂತೆ ಒತ್ತಾಯ ಮಾಡುವಾಗ ನಮ್ಮ ರಾಜ್ಯದಲ್ಲಿ ಸೇರಿಸಲ್ಪಟ್ಟ ಕನ್ನಡೇತರ ಪ್ರದೇಶಗಳ ಬಗ್ಗೆಯೂ ನಾವೊಂದು ನಿರ್ದಿಷ್ಟ ತತ್ವವನ್ನನುಸರಿಸುವುದು ಅಗತ್ಯ ಇಲ್ಲದಿದ್ದರೆ ಕಾಸರಗೋಡು, ಮತ್ತಿತರ ಕನ್ನಡ ಭಾಗಗಳನ್ನು ಕೈಬಿಡಬೇಕಾದ ಪರಿಸ್ಥಿತಿಯೊದಗಬಹುದು. ಪಶ್ಚಿಮ ವಲಯ ಸಮಿತಿಯಲ್ಲಿ ಮೈಸೂರು-ಮುಂಬೈ ಗಡಿ ವಿವಾದ ಚರ್ಚೆಯಾಗುವ ಕಾಲದಲ್ಲಿ ಮೈಸೂರು ಸರಕಾರ ಇದನ್ನು ಗಮನಿಸುವುದೆಂದು ನಾವು ನಂಬಿದ್ದೇವೆ.

ಸಂಪಾದಕೀಯ

ಉಲ್ಬಣಗೊಳ್ಳುತ್ತಿರುವ ಆಹಾರ ಪರಿಸ್ಥಿತಿ

ದೇಶದಲ್ಲಿನ ಆಹಾರ ಪರಿಸ್ಥಿತಿಯು ದಿನೇ ದಿನೇ ಉಲ್ಬಣಗೊಳ್ಳುತ್ತಿದೆ. 'ಹೆಚ್ಚು ಆಹಾರ ಬೆಳೆಯಿರಿ' ಯೋಜನೆಯಿದ್ದರೂ ಉತ್ಪಾದನೆ ನಿರೀಕ್ಷಿಸಿದಷ್ಟು ಅಧಿಕಗೊಂಡಿಲ್ಲವೆಂಬುದು ವಾಸ್ತವಾಂಶವಾಗಿದೆ. ಪರಿಸ್ಥಿತಿಯು ಗಂಭೀರವಾಗಿರುವುದರಿಂದ ಕೇಂದ್ರದ ಆಹಾರ ಸಚಿವರು ಸರಕಾರವು ಪರಿಸ್ಥಿತಿಯನ್ನು ಸ್ಥಿಮಿತಕ್ಕೆ ತರಲು ಎಲ್ಲ ಕಾರ್ಯಗಳನ್ನು ಮಾಡುವುದು ಎಂದು ಪತ್ರಿಕಾ ಗೋಷ್ಠಿಯನ್ನು ಕರೆದು ಭರವಸೆಯಿಯಾಯಬೇಕಾಗಿದೆ. ದೇಶದ ಆಹಾರ ಅಗತ್ಯತೆಯನ್ನು ಪೂರಯಿಸಲು ಭಾರೀ ಪ್ರಮಾಣದಲ್ಲಿ ಆಹಾರವನ್ನು ಆಮದು ಮಾಡಿಕೊಳ್ಳುವುದು ಸಾಗುತ್ತಿದೆ. ವಿದೇಶೀ ವಿನಿಮಯದ ಬಹ್ವಂಶ ಆಹಾರ ಧಾನ್ಯಗಳ ಆಮದಿಗಾಗಿ ವಿನಿಯೋಗವಾಗುತ್ತಿದೆ.

ಇನ್ನೊಂದೆಡೆ ಆಹಾರ ಧಾನ್ಯಗಳ ಬೆಲೆಯು ಮುಗಿಲು ಮುಟ್ಟುವಂತೆ ಒಂದೇ ಸಮನಾಗಿ ಏರುತ್ತಿದೆ. ಸರಕಾರವು ಬೆಲೆಗಳನ್ನು ಹತೋಟಿಯಲ್ಲಿರಿಸಿಕೊಳ್ಳಲು ಅಸಮರ್ಥವಾಗಿದೆ. ಜನತೆಯನ್ನು ಲಾಭದ ದಾಹವುಳ್ಳ ದಾಸ್ತಾನುಗಾರರ ಬಾಯಿಗೆ ತಳ್ಳಿದೆ. ಸಕಾಲದಲ್ಲಿ ಆಹಾರ ಧಾನ್ಯಗಳ ದಾಸ್ತಾನನ್ನು ಪಡೆದುಕೊಂಡು, ದಾಸ್ತಾನುಗಾರರ ಪುಂಡಾಟಿಕೆಯನ್ನು ಪರಿಣಾಮಕಾರಿಯಾಗಿ ಎದುರಿಸಿ, ಬೆಲೆಯನ್ನು ಹತೋಟಿಗೆ ತರುವುದರಲ್ಲಿ ಸರಕಾರ ಯಶಸ್ವಿಯಾಗಿಲ್ಲ. ಜನಸಾಮಾನ್ಯರಿಗೆ ನ್ಯಾಯವಾದ ಬೆಲೆಯಲ್ಲಿ ಆಹಾರ ಧಾನ್ಯ ಒದಗಿಸಲು ಸರಕಾರದ ನ್ಯಾಯ ದರದ ಡಿಪೋಗಳಲ್ಲಿ ಸರಬರಾಜೇ ಇಲ್ಲವಾಗಿದೆ.

ಪ್ರಥಮ ಪಂಚ ವಾರ್ಷಿಕ ಯೋಜನೆಯ ಅವಧಿಯಲ್ಲಿಯೆ ಆಹಾರ ಕ್ಷೇತ್ರದಲ್ಲಿ ದೇಶವು ಸ್ವಯಂ ಪೂರ್ಣವಾಗುವುದೆಂದು ಆಶ್ವಾಸನೆಯಿಯಲಾಗಿತ್ತು. ಆದರೆ ಇಂದು ನಾವು ದ್ವಿತೀಯ ಪಂಚ ವಾರ್ಷಿಕ ಯೋಜನೆಯ ಮೂರನೆಯ ವರ್ಷದಲ್ಲಿದ್ದೇವೆ. ಆದರೆ ಪರಿಸ್ಥಿತಿ ಮಾತ್ರ ಗಂಭೀರವಾಗಿದೆಯೇ ಹೊರತು ಉತ್ತಮಗೊಂಡಿಲ್ಲ. ಇದಕ್ಕೆ ಕಾಂಗ್ರೆಸ್ ಸರಕಾರದ ನೀತಿಗಳೇ ಕಾರಣವಾಗಿದೆ. ಆಹಾರ ಪರಿಸ್ಥಿತಿಯ ಬಗ್ಗೆ ಪತ್ರಿಕೆಗಳು, ಸಾರ್ವಜನಿಕರೂ ಕಳವಳವನ್ನು ವ್ಯಕ್ತಪಡಿಸಿದ್ದಾರೆ.

ಸರಕಾರದ ಅನಾದರಣೆ ಮತ್ತು ಅಸಮರ್ಥತೆಯ ನೀತಿಯಿಂದಾಗಿ ಇಂದು ಉತ್ತರ ಪ್ರದೇಶ, ಬಿಹಾರ, ರಾಜಾಸ್ಥಾನ್, ಪಶ್ಚಿಮ ಬಂಗಾಳಗಳಲ್ಲಿ ಆಹಾರ ಪರಿಸ್ಥಿತಿ ತೀವ್ರಗೊಂಡಿದ್ದು ಅಭಾವ ಪರಿಸ್ಥಿತಿ ಉಂಟಾಗಿದೆ. 'ಸ್ಟೇಟ್ಸ್‌ಮನ್'' ಪತ್ರಿಕೆಯ ಸುದ್ದಿಗಾರರೊಬ್ಬರು ಮಧ್ಯ ಪ್ರದೇಶದ ಜಿಲ್ಲೆಗಳಲ್ಲಿ ಪ್ರವಾಸ ಮಾಡಿ ಈರೀತಿ ಹೇಳಿದ್ದಾರೆ: "ಪ್ರಸಕ್ತ ಪರಿಸ್ಥಿತಿಯನ್ನು ವರ್ಣಿಸಲು ಕ್ಷಾಮ ಎನ್ನುವ ಪದ ಕಠಿಣವಾದೀತು, ಆದರೆ ರಾಜ್ಯ ಸರಕಾರದ ಮಾತಿನಲ್ಲಿ ಹೇಳಬೇಕಿದ್ದಲ್ಲಿ "ಅಭಾವ ಪರಿಸ್ಥಿತಿಗಳು ಎನ್ನುವುದು ನಿಜವಾಗಿ ಅಪಪ್ರಯೋಗವೇನಲ್ಲ" ಎಂದು ತಿಳಿಸಿದ್ದಾರೆ.

ನೈನಿತಾಲ್‌ನಲ್ಲಿ ಆಹಾರ ಸಚಿವ ಎ. ಪಿ. ಜೈನ್‌ರವರು ಜೂನ್ ೨೦ರಂದು ಪತ್ರಿಕಾ ಗೋಷ್ಠಿಯಲ್ಲಿ ಮಾತನಾಡುತ್ತ 1956—57ಕ್ಕೆ ಹೋಲಿಸಿದಲ್ಲಿ 1957—58ರಲ್ಲಿ ಅಖಿಲ ಭಾರತ ಆಹಾರ ಉತ್ಪಾದನೆಯಲ್ಲಿ ಶೇಕಡ ಐದರಷ್ಟು ಉತ್ಪಾದನೆ ಖೋತಾ ಆಗಿದೆ ಎಂದು ಒಪ್ಪಿಕೊಂಡಿದ್ದಾರೆ. ಅಂದಮೇಲೆ ಸರಕಾರದ ಯೋಜನೆ ಎತ್ತ ಸಾಗುತ್ತಿದೆ?

ಈ ವಿಶೇಷ ಪರಿಸ್ಥಿತಿಯನ್ನು ಇದಿರಿಸಲು, ಆಹಾರ ಉತ್ಪಾದನೆಯಲ್ಲಿ ಸ್ವಯಂಪೂರ್ಣತೆ ಪಡೆಯಲು ಸಣ್ಣ ಪುಟ್ಟ ನೀರಾವರಿ ಯೋಜನೆಗಳ ಮೇಲೆ ಸರಕಾರ ಕೇಂದ್ರೀಕರಿಸುವುದೆಂದು ಅಹಾರ ಸಚಿವರು ತಿಳಿಸಿದ್ದಾರೆ. ಹೈದರಾಬಾದಿನಲ್ಲಿ ಮಾತನಾಡುತ್ತ ಜುಲೈ ೪ರಂದು ಎ. ಪಿ. ಜೈನ್‌ರವರು ಸಣ್ಣ ಪುಟ್ಟ ನೀರಾವರಿ ಯೋಜನೆಗಳನ್ನು ಅಭಿವೃದ್ಧಿಗೊಳಿಸುವುದಕ್ಕಾಗಿ ಹಣಕಾಸಿನ ಸಚಿವ ಶಾಖೆಯು ಹೆಚ್ಚಿಗೆ ವಿನಿಯೋಗ ಮಾಡಬೇಕೆಂದು ಸೂಚಿಸಿರುವುದಾಗಿ ತಿಳಿಸಿದ್ದಾರೆ. ಆದರೆ ಸರಕಾರವು ಇಷ್ಟು ವರ್ಷಗಳ ವರೆಗೆ ಮಾಡುತ್ತಿದ್ದೇವೆ ಎಂದು ಹೇಳುತ್ತಿದ್ದುದು ಇದೇ ಕಾರ್ಯವನ್ನಲ್ಲವೇ?

ಆದ್ದರಿಂದ ಸರಕಾರವು ಪರಿಸ್ಥಿತಿಯ ಗಂಭೀರತೆಯನ್ನು ಅರಿತುಕೊಂಡು ಸೂಕ್ತ ಕ್ರಮ ತೆಗೆದುಕೊಳ್ಳಲಿ. ಅಂಕಿ ಅಂಶಗಳ ಕಣ್ಣುಮುಚ್ಚಾಲೆ, ಪ್ರಚಾರದ ದೆಸೆಯಿಂದಾಗಿ ವಾಸ್ತವ ಪರಿಸ್ಥಿತಿಯನ್ನು ಮುಚ್ಚಿಡುವ ನೀತಿಯನ್ನು ಕೈಬಿಡಲಿ.

ಹಸಿದ ಜನರಿಂದ ಕಾಕಂಬಿ ಸೇವನೆ

ಉತ್ತರ ಪ್ರದೇಶದ ಪೂರ್ವ ಜಿಲ್ಲೆಗಳಲ್ಲಿನ ರೈತರು ಬಹಳ ಕಷ್ಟ ದೆಸೆಯಲ್ಲಿ ಸಿಕ್ಕಿ ನರಳುತ್ತಿದ್ದಾರೆಂದು ಇತ್ತೀಚೆಗೆ ಐದು ದಿನಗಳ ಕಾಲ ಅಭಾವ ಪ್ರದೇಶಗಳಲ್ಲಿ ಪ್ರವಾಸಮಾಡಿ ಬಂದ ಪಿ.ಎಸ್.ಪಿ. ನಾಯಕರು ಇತ್ತಿರುವ ಹೇಳಿಕೆಯೊಂದರಲ್ಲಿ ತಿಳಿಸಿದ್ದಾರೆ.

ಗ್ರಾಮಗಳಲ್ಲಿ ಆಹಾರದ ಕೊರತೆಯಿಂದ ಪೂರ್ಣ ಅಭಾವವುಂಟಾಗಿದೆಯೆಂಬುದರಲ್ಲಿ ಸಂಶಯವೇ ಇಲ್ಲ. ಹಸಿದ ಹೆಂಗಸರು ಮಕ್ಕಳು ಕಾಕಂಬಿ, ನೆಲದ ಮೇಲೆ ಬಿದ್ದಿರುವ ಇತರ ಕಶ್ಮಲ ಪದಾರ್ಥಗಳನ್ನು ನೆಕ್ಕುತ್ತಿರುವುದಾಗಿ ವರದಿಯಾಗಿದೆ.

ರೈತರನ್ನು ಜಮಾನಿನಿಂದ ಹೊರದೂಡುವುದನ್ನು ತಡೆಗಟ್ಟಿರಿ

ಮುಖ್ಯ ಮಂತ್ರಿಗಳಲ್ಲಿ ದ. ಕ. ಜಿಲ್ಲಾ ರೈತ ಸಂಘದ ಮನವಿ

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ರೈತರನ್ನು ಜಮಾನಿನಿಂದ ಹೊರದೂಡುವುದನ್ನು ತಡೆಗಟ್ಟಬೇಕೆಂದು ದ. ಕ. ಜಿಲ್ಲಾ ರೈತ ಸಂಘವು ಮುಖ್ಯ ಮಂತ್ರಿ ಜತ್ತಿಯವರ ಬಳಿ ನಿಯೋಗ ಹೋಗಿ ಮನವಿಯೊಂದನ್ನು ಸಲ್ಲಿಸಿದೆ. ನಿಯೋಗದಲ್ಲಿ ಕರ್ನಾಟಕ ಪ್ರಾಂತ್ಯ ಕಮ್ಯೂನಿಸ್ಟ್ ಪಾರ್ಟಿ ಕಾರ್ಯದರ್ಶಿ ಎನ್. ಎಲ್. ಉಪಾಧ್ಯಾಯರೂ, ಕರ್ನಾಟಕ ಪ್ರಾಂತ ರೈತ ಸಂಘದ ಕಾರ್ಯದರ್ಶಿ ಬಿ. ವಿ. ಕಕ್ಕಿಲ್ಲಾಯರೂ, ದ. ಕ. ಜಿಲ್ಲಾ ರೈತ ಸಂಘದ ಕಾರ್ಯದರ್ಶಿ ಎಂ. ಎಚ್. ಕೃಷ್ಣಪ್ಪನವರೂ ಇದ್ದರು. ನಿಯೋಗದ ಸದಸ್ಯರು, ರೆವಿನ್ಯೂ ಸಚಿವ ಕಡಿದಾಳ್ ಮಂಜಪ್ಪನವರನ್ನು ಭೆಟ್ಟಿ ಮಾಡಿದ್ದರು. ಸಚಿವರು ಮನವಿಯಲ್ಲಿನ ಅಂಶಗಳನ್ನು ಪರಿಶೀಲಿಸುವುದಾಗಿಯೂ ಮತ್ತು ಈ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳುವುದಾಗಿಯೂ ಭರವಸೆ ನೀಡಿದ್ದಾರೆಂದು ತಿಳಿದುಬಂದಿದೆ.

ಮುಖ್ಯ ಮಂತ್ರಿಗಳಿಗೆ ಅರ್ಪಿಸಿದ ಮನವಿಯಲ್ಲಿ ಗೇಣಿ ಕೋರ್ಟುಗಳ ಮುಂದೆ ತೀರ್ಪಿಗಾಗಿ ಇರುವ ಯೋಗ್ಯ ಗೇಣಿ ಅರ್ಜಿಗಳು ತೀರ್ಮಾನವಾಗುವವರೆಗೆ, ಹೊಲದಿಂದ ರೈತರನ್ನು ಹೊರದೂಡಲು ದಾಖಲಾಗಿರುವ ಎಲ್ಲ ಅರ್ಜಿಗಳನ್ನೂ ತಡೆಹಿಡಿಯತಕ್ಕದ್ದು ಮತ್ತು 1955ರ ಮದರಾಸ್ ಕಲ್ಟಿವೇಟಿಂಗ್ ಟೆನೆನ್ಸ್ ಪ್ರೊಟೆಕ್ಷನ್ ಕಾಯಿದೆಯ ಪ್ರಕಾರ ಯೋಗ್ಯ ಗೇಣಿಯನ್ನು ಕೋರ್ಟಿನಲ್ಲಿ ಠೇವಣಿ ಇರಿಸಿರುವ ಸನ್ನಿವೇಶಗಳಲ್ಲಿ ಗೇಣಿ ಕೋರ್ಟುಗಳು ಯೋಗ್ಯ ಗೇಣಿಯನ್ನು ನಿಗದಿ ಮಾಡುವವರೆಗೆ ಜಮಾನಿನಿಂದ ಹೊರದೂಡುವ ಅರ್ಜಿಗಳ ಪರಿಶೀಲನೆಯನ್ನು ತಡೆಹಿಡಿಯತಕ್ಕದ್ದು; ಎಂದು ಪ್ರಾರ್ಥಿಸಲಾಗಿದೆ.

ಮದರಾಸ್ ಕಲ್ಟಿವೇಟಿಂಗ್ ಟೆನೆನ್ಸ್ ಪ್ರೊಟೆಕ್ಷನ್ ಕಾಯಿದೆಯು ದ. ಕ. ಜಿಲ್ಲೆಗೆ ಅನ್ವಯವಾಗಿದ್ದರೂ, ಮೈಸೂರು ಸರಕಾರವು ಅದರ ಅಡಿಯಲ್ಲಿ ಗೇಣಿ ಕೋರ್ಟುಗಳನ್ನು ರಚಿಸಲು ತಡ ಮಾಡಿತು. ಗೇಣಿ ಕೋರ್ಟುಗಳ ರಚನೆಯಾಗುವವರೆಗೆ ಹೊಲದಿಂದ ಹೊರದೂಡಲು ಸಬ್ ಡಿವಿಶನ್ ಆಫೀಸರ್ ಕೋರ್ಟಿನ ಮುಂದಿದ್ದ ಎಲ್ಲ ಅರ್ಜಿಗಳನ್ನೂ ತಡೆಹಿಡಿಯಲು ಆಜ್ಞೆ ಈಯಲಾಗಿತ್ತು. ಈಗ ಗೇಣಿ ಕೋರ್ಟು ರಚನೆಯಾದ ನಂತರದಲ್ಲಿ, ಗೇಣಿದಾರರು ಯೋಗ್ಯ ಗೇಣಿ ನಿಗದಿಗಾಗಿ ಕೋರ್ಟಿನಲ್ಲಿ ಅರ್ಜಿ ಸಲ್ಲಿಸಿ, ಅದು ಇತ್ಯರ್ಥವಾಗುವುದಿದ್ದರೂ, ಕೆಲವು ಕಡೆಗಳಲ್ಲಿ, ಸರಕಾರದ ತಡೆ ಆಜ್ಞೆಯ ಅವಧಿ ಮುಕ್ತಾಯವಾಗಿದೆಯೆಂದು ಹೇಳಿ, ಹೊಲದಿಂದ ಗೇಣಿದಾರರನ್ನು ಹೊರದೂಡಲು ಭೂಮಾಲಿಕರ ಅರ್ಜಿಗಳನ್ನು ಪರಿಶೀಲನೆಗೆ ತೆಗೆದುಕೊಂಡು ತೀರ್ಮಾನಿಸಲಾಗುತ್ತಿದೆ. ಇದರಿಂದಾಗಿ ರೈತರನ್ನು ಜಮಾನಿನಿಂದ ಹೊರದೂಡಲು ಭೂಮಾಲಿಕರಿಗೆ ಅನುಕೂಲ ಮಾಡಿಕೊಟ್ಟಂತಾಗಿದೆ. ಇದನ್ನು ತಡೆಹಿಡಿದು, ಗೇಣಿದಾರರಿಗೆ ಅನುಕೂಲ ಮಾಡಿಕೊಡಬೇಕೆಂಬುದನ್ನು ಮನವಿಯಲ್ಲಿ ತಿಳಿಸಲಾಗಿದೆ.

ದೊಡ್ಡಬಳ್ಳಾಪುರ ಆಸ್ಪತ್ರೆಯಲ್ಲಿ—

ನಾಡೀ ಪರೀಕ್ಷೆ ಇಲ್ಲ — ಜೇಬು ಪರೀಕ್ಷೆ ನಡೆದಿದೆ

ಇಲ್ಲಿಯ ಲೋಕಲ್ ಫಂಡ್ ಆಸ್ಪತ್ರೆಗೆ ಡಾ|| ಗೋರಿಯವರು ಬಂದು ಸುಮಾರು ಏಳು ಎಂಟು ವರ್ಷಗಳಾಗುತ್ತಾ ಬಂತು. ಇವರು ಅನಾದರಣೆ ಮಾಡಿದರೂ ಜನರು ಹಾಗೂ ಹೀಗೂ ಸಹಿಸಿಕೊಂಡು ಬರುತ್ತಿದ್ದರು. ಏತಕ್ಕೆಂದರೆ ಇವರು ಮುನಿಸಿಪಲ್ ಸದಸ್ಯರಾಗಿದ್ದು ಕಾಂಗ್ರೆಸ್‌ನವರಲ್ಲಿ ಪ್ರಭಾವ ಬೀರಿಕೊಂಡು ದರ್ಬಾರು ನಡೆಸುತ್ತಿದ್ದಾರೆ. ಸಾಮಾನ್ಯ ಜನರ ಬಗ್ಗೆ ಪ್ರೀತಿ ವಿಶ್ವಾಸವೇ ಇಲ್ಲ. ಕೇವಲ ಹೇಗಾದರೂ ಮಾಡಿ ದುಡ್ಡು ಲಪಟಾಯಿಸಬೇಕೆನ್ನುವ ಮನೋಭಾವ ತುಂಬಿ ತುಳುಕಾಡುತ್ತೆ. ಆಸ್ಪತ್ರೆಯಲ್ಲಿ ಒಂದು ಸಣ್ಣ ಗಾಯಕ್ಕೆ ಬ್ಯಾಂಡೇಜ್ ಸಹ ಸಿಕ್ಕುವುದಿಲ್ಲ. ಅಲ್ಲದೆ ಪಕ್ಕದಲ್ಲೇ ಇರುವ ಲೇಡಿ ಆಸ್ಪತ್ರೆಯಲ್ಲಿ ಬಡ ಜನರಿಗೆ ಉಚಿತವಾಗಿ ಮಾತ್ರೆಗಳು ಮತ್ತು ಇಂಜೆಕ್ಷನ್‌ಗಳು ಕೂಡ ಕೊಡುತ್ತಿರುವುದು ಎಲ್ಲರಿಗೂ ತಿಳಿದಿದೆ. ಆದರೆ ಈ ಮಹಾನುಭಾವರು ಜನರ ಕಣ್ಣಿಗೆ ಮಣ್ಣೆರೆಚಿ ದಬಾಯಿಸಿ ದುಡ್ಡು ವಸೂಲ್ ಮಾಡುತ್ತಿರುತ್ತಾರೆ. ಇದು ಸೇವೆ ಮಾಡುವವರ ಲಕ್ಷಣವೇ? ಹಳ್ಳಿಯವರು ಡ್ರೆಸ್ಸಿಂಗ್ ರೂಂಗೆ ಹೋದರೆ ಡಾಕ್ಟರ್ ಕೆಲಸಮಾಡುವ ಬದಲು ಜೇಬುಗಳನ್ನು ಪೋಲೀಸರಂತೆ ಜಡ್ತಿ ಮಾಡುವುದು ದಿನಚರಿಯಾಗಿದೆ. ಹಳ್ಳಿಯ ರೈತರಾಗಲೀ ಅಥವಾ ಬಡ ವಿದ್ಯಾರ್ಥಿಗಳಾಗಲೀ ಮೆಡಿಕಲ್ ಸರ್ಟಿಫಿಕೇಟ್ ಬೇಕೆಂದು ಹೋದರೆ ರೂ. 10 ಕೊಟ್ಟರೆದ್ದಲ್ಲಿ ಸಿಕ್ಕುತ್ತೆ ಇಲ್ಲದೆ ಹೋದರೆ ಸಿಗುವುದೇ ಇಲ್ಲ. ಕೇವಲ ಜನಸೇವೆಗಾಗಿ ಸಂಬಳ ತೆಗೆದುಕೊಂಡು ಕೆಲಸಮಾಡುವ ಡಾಕ್ಟರು ಈ ಮಟ್ಟಕ್ಕೆ ಇಳಿದರೆ ಜನರ ಗತಿ ಏನು? ಅಕಸ್ಮಾತ್ ಏನೊ ಪ್ರೀತಿಗಾಗಿ ಜನರು ತಾವು ಬೆಳೆದ ತರಕಾರಿಯನ್ನು ತಂದುಕೊಟ್ಟರೆ- ಏ ಮಾನು ಸಿಕ್ಕೊಲ್ವೇನಯ್ಯ-ಇದು ಬೇಡ ಮಾನು ತಂದುಕೊಡು ಚೆನ್ನಾಗಿರೋ ಔಷಧಿ ಕೊಡ್ತೀನಿ' ಅಂತಾರೆ.

ಕಾಂಗ್ರೆಸ್‌ನವರ ಅಧಿಕಾರ ಕಾಲದಲ್ಲಿ ಇವನ್ನೆಲ್ಲಾ ನೋಡಲು ಕಾಲವೇ ಸಿಕ್ಕುತ್ತಿಲ್ಲ. ಏಕೆಂದರೆ ಮೇಲ್ಪಟ್ಟ ಅಧಿಕಾರಿಗಳೆಲ್ಲಾ ಯೋಜನೆಗಳ ಕಡೆ ನಿಗಾಕೊಡುವುದೇ ಇರುವಾಗ ಇಂತಹ ಕೆಲಸಗಳನ್ನು ಕೇಳುವರಾರು? ಒಟ್ಟನಲ್ಲಿ ಜನರು ಬಹಳ ಬೇಸತ್ತಿದ್ದಾರೆ.

ಆದ್ದರಿಂದ ಸಂಬಂಧಿಸಿದ ಅಧಿಕಾರಿಗಳು ದಯವಿಟ್ಟು ಈ ಮಹಾನುಭಾವರನ್ನು ಇಲ್ಲಿಂದ ವರ್ಗಾಯಿಸಿ ಇವರ ಹಿಂದೆ ಇದ್ದ ಡಾ| ಪಾರ್ಥಸಾರಥಿಯವರಂತಹ ಜನಾನುರಾಗಿಯಾದ ಡಾಕ್ಟರನ್ನು ಕೊಡುವುದರ ಮೂಲಕ ಜನರಿಗೆ ಅನುಕೂಲ ಪಡಿಸಬೇಕೆಂದು ಕೋರುತ್ತೇವೆ.

'ಕೆಲವು ನಾಗರಿಕರು'

ವಾರದ ವಾರ್ತಾ ಸಮೀಕ್ಷೆ

ಬಟ್ಟೆಯ ಮೇಲೆ ಎಕ್ಸೈಜ್ ಸುಂಕದ ಇಳಿತಾಯ

ಭಾರತ ಸರಕಾರವು ಟೆಕ್ಸ್‌ಟೈಲ್ ಎನ್‌ಕ್ವೈರಿ ಸಮಿತಿಯ ಶಿಫಾರಸನ್ನು ಅಂಗೀಕರಿಸಿ ಬಟ್ಟೆಯ ಮೇಲಿನ ಎಕ್ಸೈಜು ಸುಂಕದಲ್ಲಿ ಇಳಿತಾಯ ತಂದಿದೆ. ಸರಕಾರದ ಪ್ರಕಟಣೆಯಂತೆ ಈ ಇಳಿತಾಯವು ಮಧ್ಯ ಮತ್ತು ಒರಟು ಬಟ್ಟೆಗಳಿಗೆ ಅನ್ವಯಿಸುತ್ತದೆ.

ಸರಕಾರದ ಈ ಇಳಿತಾಯದಿಂದ ಶೇಖರವಾಗಿರುವ ದಾಸ್ತಾನನ್ನು ಮಾರಾಟ ಮಾಡಲು ಮತ್ತು ಜನರಿಗೆ ಉಪಯೋಗವಾಗಲು ಸಾಧ್ಯವಾಗುವುದೆಂದು ಹೇಳಲಾಗಿದೆ. ಹತ್ತಿಗಿರಣಿ ಕೈಗಾರಿಕೆಯಲ್ಲಿ ತಲೆದೋರಿರುವ ಇಂದಿನ ಬಿಕ್ಕಟ್ಟನ್ನು ಸ್ವಲ್ಪ ಮಟ್ಟಿಗೆ ಸುಧಾರಿಸುವುದೇ ಇದರ ಉದ್ದಿಶ್ಯವಾಗಿದೆ. ಸಾಮಾನ್ಯ ಜನರಿಗೆ ಈ ಇಳಿತಾಯದಿಂದ ಹೆಚ್ಚಿನ ಉಪಯೋಗವಾಗಲಾರದು ಎಂದು ಹೇಳಬಹುದು.

ಎಸ್. ಕೆ. ಪಾಟೀಲರ ಬೆಂಬಲಿಗರು

ಹಿಂದೂಸ್ಥಾನ್ ಛೇಂಬರ್ ಆಫ್ ಕಾಮರ್ಸ್‌ನಲ್ಲಿ ಭಾಷಣಮಾಡುತ್ತ ಸಾರಿಗೆ ಸಚಿವ ಎಸ್. ಕೆ. ಪಾಟೀಲರು ಸಾರ್ವಜನಿಕ ಕ್ಷೇತ್ರದಲ್ಲಿರುವ ಯಾವುದೇ ಮುಷ್ಕರ ನಡೆದಲ್ಲಿ ಅದು ಸಾರ್ವಜನಿಕರಲ್ಲಿರುವ ತಿರಸ್ಕಾರವನ್ನು ತೋರಿಸುತ್ತದೆ ಎಂದು ಹೇಳಿದ್ದಾರೆ. ತಮ್ಮ ಭಾಷಣದಲ್ಲಿ ಹೆಚ್ಚಿನ ಅಂಶವನ್ನು ಇತ್ತೀಚೆಗೆ ನಡೆದ ಡಾಕ್ ಕೆಲಸಗಾರರ ಮುಷ್ಕರವನ್ನು ಖಂಡಿಸಿದ್ದಾರೆ. ಎಂಟು ಗಂಟೆ ಕೆಲಸ, ನಿಗದಿಯಾದ ಡಿವಿಡೆಂಡ್, ಹೆಚ್ಚುತ್ತಿರುವ ಕಾರ್ಮಿಕ ಸೌಲಭ್ಯಗಳು ಮತ್ತು ಅಧಿಕಗೊಳ್ಳುತ್ತಿರುವ ತೆರಿಗೆಗಳು ಇಂಥ ಕಾಲದಲ್ಲಿ ಬಂಡವಾಳಗಾರರೆಲ್ಲಿ? ಕಾರ್ಮಿಕರೆಲ್ಲಿ? ಎಂದು ಪ್ರಶ್ನೆ ಹಾಕಿ, ರಾಷ್ಟ್ರದ ಹಿತಕ್ಕೆ ವಿರೋಧವಾಗಿ ನಡೆಯುತ್ತಿರುವ ಈ ಜನರಿಗೆ ಈ ಸಹಾನುಭೂತಿ ಏಕೆ ಎಂದು ಕೇಳಿದ್ದಾರೆ.

ಪಾಟೀಲರು ಈ ಭಾಷಣದಲ್ಲಿ ಯಾರ ಪರವಾಗಿ ಯಾರಿಗಾಗಿ ಮಾತನಾಡುತ್ತಿದ್ದಾರೆ ಎಂಬುದನ್ನು ನಾವು ಹೇಳಬೇಕೇ ಇಲ್ಲ. ಹಿಂದೂಸ್ಥಾನ್ ಛೇಂಬರ್ ಆಫ್ ಕಾಮರ್ಸ್‌ನ ಶ್ರೀ ಡಿ. ಸಿ. ಕೊಠಾರ್‌ರವರೇ ಹೇಳಿಬಿಟ್ಟಿದ್ದಾರೆ. ಪಾಟೀಲರ ಭಾಷಣವನ್ನು ಪ್ರಶಂಸಿಸುತ್ತಾ ಅವರು ಹೀಗೆ ಹೇಳಿದ್ದಾರೆ. ಪಾಟೀಲರ ಭಾಷಣ ಕೇಳುತ್ತಾ ಅದು ನಮ್ಮವರಲ್ಲೇ ಒಬ್ಬರು ಮಾಡಿದ ಭಾಷಣ ಎನ್ನುವಂತಿತ್ತು, ಆದರೆ ಪಾಟೀಲರು ಸಚಿವರಾಗಿದ್ದಾರೆ ಎಂಬಷ್ಟೇ ಹೇಳಬೇಕಾಗಿದೆ.

ರಾಜಗೋಪಾಲಾಚಾರಿ ಎಚ್ಚರಿಕೆ

ಮದರಾಸಿನಲ್ಲಿ ಸ್ವಾಕ್ ಹೋಂ ಶಾಂತಿ ಸಮ್ಮೇಳನಕ್ಕೆ ಬೆಂಬಲ ನೀಡಲು ನಡೆದ ಸಮ್ಮೇಳನದಲ್ಲಿ ರಾಜಗೋಪಾಲಾಚಾರಿಯವರು ಕೇರಳದ ಮುಖ್ಯಮಂತ್ರಿ ಇ. ಎಂ. ಎಸ್. ರವರೊಂದಿಗೆ ಒಂದೇ ವೇದಿಕೆಯ ಮೇಲೆ ಭಾಷಣ ಮಾಡಿದ್ದರ ಬಗ್ಗೆ ಪತ್ರಿಕೆಗಳಲ್ಲಿ ಬೇಕಾದಷ್ಟು ಟೀಕೆ ಬಂದಿದೆ. ಕಮ್ಯೂನಿಸ್ಟರು ನನ್ನ ಮೊದಲನೆಯ ಶತ್ರು ಎಂದು ಅಂದು ಗುಡುಗಿದ ರಾಜಾಜಿ ಇಂದು ಅವರೊಂದಿಗೆ ಸಹಕರಿಸುತ್ತಿದ್ದಾರೆ ಎಂಬ ಆರೋಪಗಳು ಬಂದಿವೆ. ಈ ಆರೋಪಗಳನ್ನು ಗಮನಿಸಿ ರಾಜಗೋಪಾಲಚಾರಿಯವರು ಅಪಪ್ರಚಾರಕರಿಗೆ ಉತ್ತರವಿತ್ತಿದ್ದಾರೆ. ನಂಬೂದ್ರಿಪಾದ್‌ರ ಜೊತೆ ಭಾಷಣಮಾಡಿದ್ದು ತಪ್ಪಲ್ಲವೆಂದು ಸಮರ್ಥಿಸಿದ್ದಾರೆ. ಅಷ್ಟೇ ಅಲ್ಲ ಧರ್ಮದ ಆಧಾರದಿಂದ ಕೂಡಿದ ಜಾತೀಯತೆಗಿಂತ ಅಪಾಯಕರವಾದ ಹೊಸ ರೀತಿಯ ಜಾತಿಯೊಂದು ಬೆಳೆದುಬರಬಹುದಾದ ಅಪಾಯವಿದೆ. ಇದು ಒಂದು ರಾಜಕೀಯ ಪಕ್ಷದೊಡನೆ ಇನ್ನೊಂದು ರಾಜಕೀಯ ಪಕ್ಷ ಬೆರೆಯದಂತಹ ಸಂಕುಚಿತ ರಾಜಕೀಯ ಗುಂಪುಗಳ ಆಧಾರದ ಮೇಲೆ ಬೆಳೆಯುವ ಭೀತಿ ಇದೆ ಎಂದು ಎಚ್ಚರಿಸಿದ್ದಾರೆ. ಕಮ್ಯೂನಿಸ್ಟ್ ಪಾರ್ಟಿಯೊಂದಿಗೆ ಯಾವುದೇ ಪ್ರಶ್ನೆಯ ಮೇಲೂ ಸೇರಲು ನಿರಾಕರಿಸುವ ಪಕ್ಷಗಳ ನೀತಿಯ ವಿರುದ್ಧ ರಾಜಾಜಿಯವರು ಎಚ್ಚರಿಸಿದ್ದಾರೆ.

ಅಣು ಪ್ರಯೋಗಗಳ ವಿರುದ್ಧ ಚಳವಳಿಗೆ ಯಾವ ರಾಜಕೀಯ ಅಥವ ರಾಷ್ಟ್ರೀಯ ನೀತಿ ಇಲ್ಲವೆಂದೂ, ಅಣು ಪ್ರಯೋಗಗಳ ವಿರುದ್ಧ ಪ್ರಬಲ ಸಾರ್ವಜನಿಕಾಭಿಪ್ರಾಯವನ್ನು ಸಂಗ್ರಹಿಸಬೇಕೆಂದೂ ತಿಳಿಸಿದ್ದಾರೆ.

ಕದನ ವಿರಾಮ ರೇಖೆಯ ಉಲ್ಲಂಘನೆ

ಕಾಶ್ಮೀರದ ಕದನ ವಿರಾಮ ರೇಖೆಯನ್ನು ಉಲ್ಲಂಘಿಸಲು ಆಜಾದ್ ಕಾಶ್ಮೀರದಲ್ಲಿನ ಕೆಲವರು ಯತ್ನಿಸಿದ್ದಾರೆ. ಗುಲಾಂ ಮಹಮದ್ ಅಬ್ಬಾಸ್‌ರವರ ನೇತೃತ್ವದಲ್ಲಿ ಕಳೆದ ವಾರ ಕಾಶ್ಮೀರವನ್ನು ಬಂಧ ವಿಮೋಚನೆಗೊಳಿಸುವ ಚಳವಳಿಯ ಅಂಗವಾಗಿ ಕದನವಿರಾಮ ರೇಖೆಯನ್ನು ಉಲ್ಲಂಘಿಸಲು ಯತ್ನಿಸಿದರು. ಪಾಕೀಸ್ಥಾನ ಸರಕಾರ ಮತ್ತೆ ಬಿಡುಗಡೆ ಮಾಡಿತು. ಅವರ ಬಿಡುಗಡೆಯಾದನಂತರವೂ ಅಬ್ಬಾಸ್‌ರವರು ತಾವು ಕದನವಿರಾಮ ರೇಖೆಯನ್ನು ಉಲ್ಲಂಘಿಸುವ ಯೋಚನೆ ಬಿಟ್ಟಿರುವುದಿಲ್ಲ. ಹದಿನಾರು ಮಂದಿ ಪಾಕೀಸ್ತಾನಿಗಳು ಕದನ ವಿರಾಮ ರೇಖೆಯನ್ನು ಉಲ್ಲಂಘಿಸಿ ಬಂಧಿತರಾಗಿದ್ದಾರೆ.

ಪಾಕೀಸ್ತಾನ ಸರಕಾರ ಈ ಕದನವಿರಾಮ ರೇಖೆಯನ್ನು ದಾಟುವ ಚಳವಳಿಗೆ ನೇರವಾಗಿ ಬೆಂಬಲಕೊಡದಿದ್ದರೂ ಪರೋಕ್ಷವಾಗಿ ಕುಮ್ಮಕ್ಕು ಕೊಡುತ್ತಿದೆ ಎಂದು ಹೇಳಬಹುದಾಗಿದೆ. ಭಾರತದೊಂದಿಗೆ ಶೀತ ಯುದ್ಧ ನಡೆಸುತ್ತಿರುವ ಪಾಕೀಸ್ತಾನವು ಅದನ್ನು ತೀವ್ರಗೊಳಿಸಲು ಯತ್ನಿಸುತ್ತಿದೆ. ಕದನ ವಿರಾಮ ರೇಖೆಯನ್ನು ಮುರಿಯುವ ಎಲ್ಲ ಯತ್ನಗಳನ್ನು ತಡೆಯುವುದು ಅತ್ಯಗತ್ಯವಾಗಿದೆ. ಭಾರತ ಸರಕಾರವು ಈ ಸೂಕ್ತವಾದ ಕ್ರಮ ತೆಗೆದುಕೊಂಡು ಪರಿಸ್ಥಿತಿಯನ್ನು ಎದುರಿಸುವುದು ಅಗತ್ಯ.

ಕಾಲುವೆ ನೀರಿನ ವಿವಾದ

ಭಾರತ–ಪಾಕೀಸ್ತಾನಗಳ ನಡುವೆ ಇರುವ ಕಾಲುವೆ ನೀರಿನ ವಿವಾದದ ಬಗ್ಗೆ ಇತ್ಯರ್ಥಗೊಳಿಸಲು ವಿಶ್ವ ಬ್ಯಾಂಕಿನ ಮತ್ತೊಂದು ನಿಯೋಗವು ಇತ್ತೀಚೆಗೆ ಸಂದರ್ಶನ ಮತ್ತು ಪರಿಶೀಲನೆ ನಡೆಸಿದೆ. ಭಾರತ ಸರ್ಕಾರವು 1962ರಿಂದ ಮುಂದೆ ಪಾಕೀಸ್ತಾನಕ್ಕೆ ನೀರನ್ನು ಒದಗಿಸಲಾಗುವುದಿಲ್ಲವೆಂದು ತಿಳಿಸಿದೆ. ಮುಂಬರುವ ಲಂಡನ್ನಿನಲ್ಲಿ ನಡೆಯುವ ಸಭೆಯಲ್ಲಿ ಈ ಪ್ರಶ್ನೆಯ ಬಗ್ಗೆ ಅಂತಿಮ ನಿರ್ಧಾರ ಆಗುವ ಭರವಸೆ ಇದೆ.

ಈ ಮಧ್ಯೆ ಪಾಕೀಸ್ತಾನದ ಪ್ರಧಾನಿ ಫಿರೋಜ್ ಖಾನ್ ನೂನ್‌ರವರು ಕಾಲುವೆ ನೀರಿನ ಪ್ರಶ್ನೆಯ ಮೇಲೆ ಭಾರತ ಸರಕಾರವು ಅನ್ಯಾಯ ಮಾಡಿದೆ ಎಂದು ಘೋಷಿಸಿದ್ದಾರೆ. ಆದರೆ ಭಾರತ ಸರಕಾರವು ವಿಶ್ವ ಬ್ಯಾಂಕಿನವರ ಹಿಂದಿನ ಸಲಹೆಗಳನ್ನು ಒಪ್ಪಿದ್ದರೂ ಪಾಕೀಸ್ತಾನ ಅದನ್ನು ಒಪ್ಪದೆ, ವಾಗ್ದಾನವನ್ನು ಮುರಿದಿದೆ. ಹೀಗಿರುವಾಗ ಪಾಕೀಸ್ತಾನದ ಆಪಾದನೆ ನಿರಾಧಾರವಾದುದಾಗಿದೆ.

ನೂನ್‌ರವರು ತಮ್ಮ ಪತ್ರಿಕಾ ಸಮ್ಮೇಳನದಲ್ಲಿ ಭಾರತದ ವಿರುದ್ಧವಾಗಿ ಪಾಕೀಸ್ತಾನವು ಯುದ್ಧ ನಡೆಸುವುದಿಲ್ಲವೆಂದೂ ಆದರೆ ಒಪ್ಪಂದಕ್ಕೆ ಮಾತ್ರ ಸಿದ್ಧವಿಲ್ಲವೆಂದೂ ಹೇಳಿದ್ದಾರೆ. ಇದರ ಅರ್ಥ ಅವರಿಗೇ ಬಿಡಬೇಕಾಗಿದೆ.

ಡಲ್ಲೆಸ್—ಡಿಗಾಲ್ ಭೇಟಿ

ಬ್ರಿಟಿಷ್ ಪ್ರಧಾನಿ ಹೆರಾಲ್ಡ್ ಮ್ಯಾಕ್‌ಮಿಲನ್‌ರವರು ಫ್ರಾನ್ಸ್ ಪ್ರಧಾನಿ ಡಿಗಾಲ್‌ರವರನ್ನು ಭೆಟ್ಟಿ ಮಾಡಿ, ಅಂತರರಾಷ್ಟ್ರೀಯ ಪರಿಸ್ಥಿತಿ ಮತ್ತು ಇತರ ವಿಷಯಗಳನ್ನು ಕುರಿತು ಮಾತುಕತೆ ನಡೆಸಿ, ತಮ್ಮ ಏಕಾಭಿಪ್ರಾಯ ವ್ಯಕ್ತಗೊಳಿಸಿದರು.

ಇದೀಗ ಅಮೇರಿಕದ ವಿದೇಶಾಂಗ ಖಾತೆ ಕಾರ್ಯದರ್ಶಿ ಜಾನ್ ಫಾಸ್ಟರ್ ಡಲ್ಲೆಸ್‌ರವರು ಡಿಗಾಲ್‌ರ ಸಂದರ್ಶನ ನಡೆಸಿದ್ದಾರೆ. ಮಾತುಕತೆಗಳು ಸೌಹಾರ್ದಯುತ ವಾತಾವರಣದಲ್ಲಿ ನಡೆಯುತ್ತಿವೆಯೆಂದು ವರದಿಯಾಗಿದೆ. ಫಾಸಿಸ್ಟ್ ಡಿಗಾಲ್‌ರೊಂದಿಗೆ ಬ್ರಿಟನ್ ಅಮೇರಿಕಗಳು ಪ್ರಥಮ ಸಂಪರ್ಕ ಬೆಳೆಸಿವೆ. ಅಂತರರಾಷ್ಟ್ರೀಯ, ಮಧ್ಯಪ್ರಾಚ್ಯ ಮತ್ತಿತರ ಪ್ರಶ್ನೆಗಳ ಮೇಲೆ ಮಾತುಕತೆ ನಡೆಸಿವೆ.

ಜಿನೀವಾ ಮಾತುಕತೆಗಳು

ಅಣು ಶಸ್ತ್ರ ಪ್ರಯೋಗದ ಪತ್ತೆಯ ಬಗ್ಗೆ ವೈಜ್ಞಾನಿಕ ತಜ್ಞರುಗಳು ಜಿನೀವಾದಲ್ಲಿ ನಡೆಸುತ್ತಿರುವ ಮಾತುಕತೆಗಳು ಉತ್ತಮ ವಾತಾವರಣದಲ್ಲಿ ಮುಂದುವರಿಯುತ್ತಿವೆ. ಪೂರ್ವ ಮತ್ತು ಪಶ್ಚಿಮ ರಾಷ್ಟ್ರಗಳ ತಜ್ಞರ ಈ ಮಾತುಕತೆಗಳು ಯಶಸ್ವಿಯಾದಲ್ಲಿ ಶೃಂಗ ಸಮ್ಮೇಳನ ನಡೆಸಲು ಸಹಾಯಕವಾದೀತೆಂಬ ನಂಬಿಕೆಯುಂಟಾಗಿದೆ.

ಈ ಮಧ್ಯೆ ಸೋವಿಯತ್ ಯೂನಿಯನಿನ ಪ್ರಧಾನಿ ನಿಕಿಟ ಕ್ರುಶ್ಚೇವ್‌ರವರು ಹಠಾತ್ತಾಗಿ ನಡೆಯುವ ಧಾಳಿಗಳನ್ನು ತಡೆಯುವ ಜಂಟಿ ಕ್ರಮವನ್ನನುಸರಿಸುವ ಬಗ್ಗೆ ಹೊಸ ಸೂಚನೆಯನ್ನು ಪಶ್ಚಿಮ ರಾಷ್ಟ್ರಗಳಿಗೆ ಇತ್ತಿದ್ದಾರೆ. ಪಶ್ಚಿಮ ರಾಷ್ಟ್ರಗಳು ಈ ಸಲಹೆಯನ್ನು ಪರಿಶೀಲಿಸುತ್ತಿವೆ. ಅಂತರರಾಷ್ಟ್ರೀಯ ಉದ್ರಿಕ್ತ ವಾತಾವರಣವನ್ನು ಸಡಿಲಿಸಲು, ಶೃಂಗ ಸಮ್ಮೇಳನ ನಡೆಯಲು ಅನುವು ಮಾಡಲು ಸೋವಿಯತ್ ಯೂನಿಯನ್ ಮೇಲಿಂದ ಮೇಲೆ ಸಲಹೆಗಳನ್ನು ಮಂಡಿಸುತ್ತಿದೆ. ಆದರೆ ಪಶ್ಚಿಮ ರಾಷ್ಟ್ರಗಳು ಕುಂಟು ನೆಪವನ್ನು ಹಾಕಿ ಅವನ್ನು ತಳ್ಳಿಹಾಕುತ್ತಿವೆ. ಅಮೇರಿಕ ಬ್ರಿಟನ್‌ಗಳು ಇದೀಗ ಇಮ್ರೆ ನಾಜ್ ಮತ್ತವನ ಗುಂಪಿನ ಮರಣದಂಡನೆಯನ್ನು ಬಳಸಿಕೊಂಡು ಶೃಂಗ ಸಮ್ಮೇಳನ ನಡೆಸುವುದನ್ನು ಅಡ್ಡಿ ಮಾಡಲು ನೋಡುತ್ತಿದೆ. ಪಶ್ಚಿಮ ರಾಷ್ಟ್ರಗಳ ಈ ನೀತಿ ಖಂಡನೀಯವಾಗಿರುವುದೇ ಅಲ್ಲದೆ, ವಿಶ್ವದ ಜನಾಭಿಪ್ರಾಯಕ್ಕೆ ವಿರೋಧವಾದುದಾಗಿದೆ.

"ರಮೇಶ"

ರೂಪಾಯಿ 2,000 ಪಾರ್ಟಿ ನಿಧಿಗೆ ಸಹಾಯ

ನಿನ್ನೆ ಸಂಜೆ (7-7-'58) ಒಬ್ಬ ಖಾದಿಧಾರಿ ವ್ಯಕ್ತಿ ಆಫೀಸಿಗೆ ಬಂದು "ಸ್ವಾಮಿ, ಜನಶಕ್ತಿಯಲ್ಲಿ ಪಾರ್ಟಿ ನಿಧಿಗೆ ಕೊಟ್ಟ ಕರೆಯನ್ನೋದಿದೆ. ದಯವಿಟ್ಟು ನನ್ನ ಅಲ್ಪ ಕಾಣಿಕೆಯನ್ನು ಸ್ವೀಕರಿಸಬೇಕು" ಎಂದು ಹೇಳಿ, 0—8—0ಯನ್ನು ಕೊಟ್ಟರು. ಆ ವ್ಯಕ್ತಿಯ ಹೆಸರು ಹನುಮಂತ ಜಟ್ಟಿಯೆಂದು. ಒಂದು ಕಾಲದಲ್ಲಿ ಪೋಲಿಸ್ ಇಲಾಖೆಯಲ್ಲಿ 12 ವರ್ಷ ಸೇವೆ ಸಲ್ಲಿಸಿ ಕಾರಣಾಂತರದಿಂದ (ಲಂಚದ ಆರೋಪವೇನಲ್ಲ!) ಕೆಲಸದಿಂದ ನಿವೃತ್ತಿಗೊಳಪಟ್ಟು ಈಗೊಂದು ಕಾರ್ಖಾನೆಯಲ್ಲಿ ದಿನಗೂಲಿಗೆ ದುಡಿಯುತ್ತಿದ್ದಾರೆ. ಅರೆ ಉಪವಾಸದಿಂದ ನರಳುತ್ತಿರುವ ಜಟ್ಟಿಯವರ ಕಾಣಿಕೆ ತುಂಬಾ ಶ್ಲಾಘನೀಯವಾಗಿದೆ. ಇಂಥವರ ಸಹಾಯವೇ ಕಮ್ಯೂನಿಸ್ಟ್ ಪಾರ್ಟಿಗೆ ಸ್ಫೂರ್ತಿ ನೀಡುವಂತಹುದಾಗಿರುತ್ತದೆ.

ನಮ್ಮ ಈ ಪಾರ್ಟಿನಿಧಿಯ ಕರೆಯನ್ನು ಬೇಗನೇ ಪೂರೈಸಲು ಎಲ್ಲ ವಾಚಕರೂ, ಪಾರ್ಟಿ ಘಟಕಗಳೂ ನೆರವಾಗುವರೆಂದು ನಂಬಿದ್ದೇವೆ. ಈ ತಿಂಗಳೊಳಗೆನೇ ಗುರಿ ಮುಟ್ಟಬೇಕೆಂದು ನಮ್ಮ ಅಭಿಲಾಷೆ.

ಹಿಂದೆ ವಸೂಲಾದ್ದು	ರೂ.	450-00
ಒಬ್ಬ ಹಿತೈಷಿಯಿಂದ	ರೂ.	100-00
ಡಾ। ಚಂಡೂರು	,,	5-00
ಜಟ್ಟಿ	,,	0-50
ಒಟ್ಟು	ರೂ.	555-50

ಸೋವಿಯತ್ ಸ್ಪೂತ್ನಿಕ್ ಕತೆ — ೨

ಉಪಗ್ರಹವು ತನ್ನ ಸ್ವಂತ, ಸ್ವತಂತ್ರ ಗ್ರಹ ಪಥದಲ್ಲಿ ಭೂಮಿಯ ಸುತ್ತಲೂ ಏಕೆ ಸುತ್ತುತ್ತದೆ? ಭೂ-ಗ್ರಹದ ಪರಿಭ್ರಮಣವನ್ನು ಅದು ಏಕೆ ಅನುಸರಿಸುವುದಿಲ್ಲ? ಸೂರ್ಯಗ್ರಹವನ್ನು ಸುತ್ತುವರಿಯುವುದರಲ್ಲಿ 'ಸ್ಪೂತ್ನಿಕ್' ನಮ್ಮ 'ಭೂಗ್ರಹದೊಂದಿಗೇ ಏಕೆ ಇರುತ್ತದೆ? ಈ ಪ್ರಶ್ನೆಗಳಿಗೆ ಪ್ರೊಫೆಸರ್ ಕಿರಿಲ್ ಸ್ಟಾನ್ಯುಕೋವಿಚ್‌ರವರು ಇಲ್ಲಿ ಉತ್ತರಗಳನ್ನಿತ್ತಿದ್ದಾರೆ.

ಕೌಣಿಕ ಆವೇಗದ (ಅಂಗ್ಯುಲರ್ ಮೊಮೆಂಟಮ್) ಶಕ್ತಿ ಸ್ಥಾಯಿತ್ವದ ನಿಯಮಕ್ಕನುಸಾರವಾಗಿ ಇದು ಸಂಭವಿಸುತ್ತದೆ. ವಾತಾವರಣದ ಉನ್ನತ ಸ್ತರಗಳಲ್ಲಿ ಹಾರಿಸಲ್ಪಟ್ಟಾಗ ಒಂದು ಸೆಕೆಂಡಿಗೆ ೮,೦೦೦ ಮೀಟರುಗಳ ವೇಗವನ್ನು ಕೊಡಲಾಗಿದ್ದ 'ಸ್ಪೂತ್ನಿಕ್'ಗಳ (ಉಪಗ್ರಹಗಳ) ಕೇಂದ್ರಾಪಗಮನ ಬಲವು (ಸೆಂಟ್ರಿ ಫ್ಯೂಗಲ್

ಉಪಗ್ರಹವು ತನ್ನ ಗ್ರಹಪಥದಲ್ಲೆ ಏಕೆ ಸುತ್ತುತ್ತದೆ ?

ಫೋರ್ಸ್) ಭೂಮಿಯ ಗುರುತ್ವಾಕರ್ಷಣ ಶಕ್ತಿಯ ಬಲವನ್ನು ನಿಷ್ಪ್ರಯೋಜಕಗೊಳಿಸುತ್ತದೆ.

ವೇಗ ಪತನವಾಗುವವರೆಗೂ ಉಪಗ್ರಹವು ಬುಗುರಿಯಂತೆ ತನ್ನ ಗ್ರಹಪಥವನ್ನನುಸರಿಸಿಕೊಂಡು ತಿರುಗುತ್ತಾ ಮುಂದುವರಿಯುವುದು. ಸಮಭಾಜಕ ವೃತ್ತಕ್ಕೆ ಒಂದು ಕೋನಾಂತರದಲ್ಲಿ ಉಪಗ್ರಹ ಗಮನ ಪಥವನ್ನು ನೆಲೆಗೊಳಿಸಿದ್ದ ಪಕ್ಷದಲ್ಲಿ, —ಸೋವಿಯತ್ ಉಪಗ್ರಹಗಳ ಕಕ್ಷೆಯು ಆ ರೀತಿ ಇವೆ,-ಆಗ, ಭೂಮಿಯು ಸ್ವತಃ ಸುತ್ತುತ್ತಿರುತ್ತದೆಯಾದುದರಿಂದ, ಅದು ನಮ್ಮ ಭೂಗ್ರಹದ ಬೇರೆ ಬೇರೆ ಸ್ಥಳಗಳ ಮೇಲೆ ಹಾರುತ್ತದೆ.

ಭೂಮಿಯ ಸುತ್ತಲೂ ಸುತ್ತುವ ಉಪಗ್ರಹದ ಪರಿಭ್ರಮಣದ ಕಾಲಾವಧಿಯು, ಭೂಮಿಯಿಂದ ಅದಕ್ಕಿರುವ ದೂರವು ಹೆಚ್ಚಿದಂತೆ ವೃದ್ಧಿಯಾಗುತ್ತಿರುತ್ತದೆಯೆಂದು ತಿಳಿದುಬಂದಿದೆ. ೧,೭೦೦ ಕಿಲೋ ಮೀಟರುಗಳಷ್ಟು ಎತ್ತರದಲ್ಲಿ ಹಾರುತ್ತಿರುವ ಉಪಗ್ರಹವು ೬೯ ನಿಮಿಷಗಳಿಗೊಮ್ಮೆ ಭೂ ಪ್ರದಕ್ಷಿಣೆ ಮಾಡಿದರೆ, ಭೂಮಿಗೆ ೪,೦೦,೦೦೦ ಕಿಲೋ ಮೀಟರ್ ದೂರದಲ್ಲಿರುವ ಚಂದ್ರಗ್ರಹವು ಭೂಮಿಯ ಸುತ್ತಲೂ ಒಂದು ಪರಿಭ್ರಮಣೆಯನ್ನು ಮಾಡಲು ನಾಲ್ಕು ವಾರಗಳು ಬೇಕಾಗುತ್ತವೆ. ಆದುದರಿಂದ, ಭೂಮಿಯಾಚೆಯ ಒಂದು ನಿರ್ದಿಷ್ಟ ದೂರದಲ್ಲಿ, ಉಪಗ್ರಹವು ಕರಾರುವಾಕಾಗಿ ೨೪ ಗಂಟೆಗಳಿಗೊಮ್ಮೆ ಪೃಥ್ವೀಗೋಳದ ಸುತ್ತಲೂ ತಿರುಗುವುದು.

ಭೂಮಿಗೆ ೩೬,೮೦೦ ಕಿಲೋ ಮೀಟರುಗಳಷ್ಟೆತ್ತರದಲ್ಲಿ ವಿಷುವವೃತ್ತ ಕೆಳಸಮಾನ ಮಟ್ಟದಲ್ಲಿ 'ಸ್ಪೂತ್ನಿಕ್' ಹಾರಿದ ಪಕ್ಷದಲ್ಲಿ ಇದು ಸಾಧ್ಯವೆಂದು ಅಂದಾಜು ಮಾಡಲಾಗಿದೆ. ಈ ಸಂದರ್ಭದಲ್ಲಿ ಅದರ ಕೌಣಿಕ ವೇಗವು ಭೂಮಿಯ ಕೌಣಿಕ ವೇಗಕ್ಕೆ (ಅಂಗ್ಯುಲರ್ ಸ್ಪೀಡ್) ಸರಿಸಮನಾಗಿರುತ್ತದೆ. ಆಗ ಉಪಗ್ರಹವು ಒಂದೇ ಕಡೆ ಇದ್ದಂತೆ ಭೂಮಿಗೆ ಗೋಚರವಾಗುವುದು! ವಸ್ತುತಃ ಆಗ ಭೂಮಿಯ ಕಕ್ಷೆಯೂ ಮತ್ತು ಉಪಗ್ರಹಪಥವೂ 'ಸಮಪಾತ'ವಾಗಿರುವುವು.

ಸೂರ್ಯಗ್ರಹದ ಸುತ್ತಲೂ ತಿರುಗುವಾಗ ಉಪಗ್ರಹವು ಭೂಮಿಯೊಂದಿಗೇ ಏಕೆ ಇರುತ್ತದೆಯೆಂಬ ಪ್ರಶ್ನೆಗೆ, ನಮ್ಮ ಭೂ-ಗ್ರಹದ ಗುರುತ್ವಾಕರ್ಷಣ ಶಕ್ತಿಯಿಂದ ಹಾಗಾಗುತ್ತದೆಯೆಂದು ಹೇಳಬೇಕಾಗುತ್ತದೆ. ನಿಜವಾಗಿಯೂ ಭೂಮಿಯ ಸ್ವಾಭಾವಿಕ ಉಪಗ್ರಹವಾಗಿರುವ ಚಂದ್ರಗ್ರಹವೂ ಕೂಡ, ಭೂಮಿಯೊಂದಿಗೇ ಸೂರ್ಯ ಗ್ರಹದ ಸುತ್ತಲೂ ಒಂದೇ ಗ್ರಹ ಪಥವನ್ನು ಅನುಸರಿಸುತ್ತದೆ.

ತೃತೀಯ ಉಪಗ್ರಹವು ಕಂಡಿತು

ಜೂನ್ ದಿನಾಂಕ 24-25ರ ರಾತ್ರಿ ತೃತೀಯ ಕೃತಕ ಉಪಗ್ರಹವು ಮೊದಲನೆಯ ಸಾರಿ ರಾತ್ರಿಯ ಹೊತ್ತಿನಲ್ಲಿ ಮಾಸ್ಕೋ ಮೇಲೆ ಹಾದುಹೋಯಿತು. ಇದರ ಸವಿಾಕ್ಷೆಗಾಗಿ ಸಿದ್ಧತೆಗಳಿಲ್ಲವೂ ಆಗಿದ್ದುವು.

ದಿನಾಂಕ 23-24ರ ರಾತ್ರಿ ವಾಹಕ ಆಕಾಶ ಬಾಣವು ಮಾಸ್ಕೋನಗರದ ಗೋಚರವಲಯದಲ್ಲಿ ಹಾದುಹೋಯಿತಾದರೂ, ಮೋಡಗಳು ಸವಿಾಕ್ಷೆಗಳಿಗೆ ಅಡ್ಡಬಂದುವು.

ಬಹುಕಾಲದಿಂದಲೂ ತೃತೀಯ ಸೋವಿಯತ್ ಕೃತಕ ಭೂ-ಉಪಗ್ರಹವೂ ಮತ್ತು ವಾಹಕ ಆಕಾಶಬಾಣವೂ ಹಗಲು-ರಾತ್ರಿಗಳಲ್ಲಿ ಸೋವಿಯತ್ ಭೂಭಾಗದ ಮೇಲೆ ಹಾದುಹೋಗಿದ್ದುದಾದರೂ, ದೃಗ್ಗೋಚರಕ್ಕೆ ಅಸಾಧ್ಯವಾಗಿದ್ದುವು. ಈಗ ಉಪಗ್ರಹವೂ ಮತ್ತು ವಾಹಕ ಆಕಾಶಬಾಣವೂ ಸೋವಿಯತ್ ಅಕ್ಷಾಂಶಗಳಲ್ಲಿ ಕಂಡುಬರುತ್ತಿವೆ.

ಮೊಟ್ಟಮೊದಲಿಗೆ ತೃತೀಯ ಉಪಗ್ರಹವು ದೇಶದ ದಕ್ಷಿಣ ಭಾಗದಲ್ಲಿ ಕಂಡುಬಂದಿತು. ಜೂನ್ ದಿನಾಂಕ 13ರಂದು ಬಾಕು, ಸ್ಟಾಲಿನ್‌ಗ್ರಾಡ್, ಬುಖಾರಾ ಮತ್ತು ತಾಷ್ಕೆಂಟ್‌ನಗರಗಳಲ್ಲಿ ಉಪಗ್ರಹವು ಕಾಣಿಸಿತು. ಜೂನ್ ದಿನಾಂಕ 15ರಂದು ಸ್ಟಾಲಿನಾಬಾದಿನಲ್ಲಿರುವ, ತಾಜಿಕ್ ವಿಜ್ಞಾನ ಶಾಸ್ತ್ರ ಪರಿಷತ್ತಿಗೆ ಸೇರಿದ ಖಗೋಳ ಭೌತಶಾಸ್ತ್ರವಿದ್ಯಾಲಯದ ಸವಿಾಕ್ಷಕರು ಉಪಗ್ರಹದ ಛಾಯಾ ಚಿತ್ರವನ್ನು ತೆಗೆದುಕೊಂಡರು. ಬಾಕು ಅಲ್ಮಾಆತಾ, ತಾಷ್ಕೆಂಟ್, ಮತ್ತು ಇನ್ನಿತರ ನಗರಗಳಲ್ಲಿ ವಾಹಕ ಆಕಾಶಬಾಣದ ಚಿತ್ರೀಕರಣವಾಯಿತು.

ಪ್ರೊ. ಮಹಾಲನೋಬೀಸ್‌ರವರಿಗೆ ಸೋವಿಯತ್ ಗೌರವ !

ವಿಜ್ಞಾನಶಾಸ್ತ್ರ ಪರಿಷತ್ತಿಗೆ ಆಯ್ಕೆಯಾದರು

ಭಾರತೀಯ ಅಂಕಿ-ವಿವರ ಶಸ್ತ್ರಾಲಯದ ಕಲ್ಕತ್ತಾ ಮುಖ್ಯ ಕಚೇರಿಯ ನಿರ್ದೇಶಕರಾದ ಪ್ರೊ. ಪಿ.ಸಿ. ಮಹಾಲನೋಬಿಸ್‌ರವರು, ಇತ್ತೀಚೆಗೆ ಸೋವಿಯೆತ್ ವಿಜ್ಞಾನ ಶಾಸ್ತ್ರ ಪರಿಷತ್ತಿಗೆ ಆಯ್ಕೆಹೊಂದಿದ 32ಮಂದಿ ಪ್ರಮುಖ ವಿದೇಶೀ ವಿಜ್ಞಾನಿಗಳಲೊಬ್ಬರಾಗಿದ್ದಾರೆ. ಪರಿಷತ್ತಿನ ಅರ್ಥಶಾಸ್ತ್ರ ತತ್ವಶಾಸ್ತ್ರ ಮತ್ತು ಕಾನೂನು ಶಾಖೆಯ ಸದಸ್ಯರಾಗಿರುವರು.

ಅಮೇರಿಕದ ಲೀನಸ್ ಪಾಲಿಂಗ್‌ರವರೂ, ನೋಬೆಲ್ ಪಾರಿತೋಷಕ ವಿಜೇತರಾದ ಜರ್ಮನ್ ಜನಾಧಿಪತ್ಯವಾದೀ ಗಣತಂತ್ರದ ಗುಸ್ತಾವ್ ಹೆರ್ಟ್ಜ್‌ರವರೂ ಬ್ರಿಟನ್ನಿನ ಸೆಸಿಲ್ ಫ್ರಾಂಕ್ ಪೋವೆಲ್‌ರವರೂ ಮತ್ತು ಜಸ್ ಬೆರ್ನಾಲ್‌ರವರೂ ಮತ್ತು ಚೀಣದ ಕೂಮೊ-ಜೋರವರೂ ಪರಿಷತ್ತಿಗೆ ಆಯ್ಕೆಹೊಂದಿದ ಇತರ ಪ್ರಮುಖ ವಿಜ್ಞಾನಿಗಳು.

"ಚುಟುಕ—ಚುರುಕು"

ಲಂಚಗುಳಿ

ಹೊಟ್ಟೆ ಹೊರಕೊಳ್ಳುವುದೆ
ಕಷ್ಟವಾಗಿಹ ಜೀವಿ
ಬಿಡಿ ಕಾಸು ಕೊಂಡರೂ ಲಂಚ-
ಗುಳಿ !
ಬಂಡಿ ನುಂಗುವ ಬಕಾಸುರ
ಕಾಯಿದೆಗೆ ಇಂಗು
ಹಚ್ಚಿ, ಮೆರೆಯುವ—
ಸಾಧುವೇಷ ತಾಳಿ.

ಪುಂಡ—ಮುಖಂಡ

ಹಳ್ಳಿಯಲಿ ಚೆಲ್ಲಾಟ ನಡೆಸಿ
ಸುಲಿಗೆಯ ಮಾಳ್ಪ
ಕ್ಷುದ್ರ ಜೀವಿಯೊ ಕಳ್ಳ-ಭಂಡ-
ಪುಂಡ !
ಹೆಮ್ಮೇಳವನೆ ಕಟ್ಟಿ ನೂರಾರು
ಹಳ್ಳಿಗಳ
ಕೊಳ್ಳೆ ಹೊಡೆಯುವ ಕಿಳ್ಳೆಕೇತನೆ
ಮುಖಂಡ !

ಎಂ. ಅಕಬರ್ ಅಲಿ

ಹುರಿಗಾಳು

"ಪ್ರಜಾಪ್ರಭುತ್ವ ಪರ

ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಸಾದಿಕ್ ಅಲಿ ಪ್ರತ್ಯೇಕವಾಗಿ ಕೇರಳದ ಪ್ರತಿಪಕ್ಷಗಳ ಕರ್ತವ್ಯ ಮತ್ತು ಹೊಣೆಗಾರಿಕೆ ಏನೆಂದು ಹೀಗೆ ವಿವರಿಸಿದ್ದಾರೆ: "ಅಧಿಕಾರದಲ್ಲಿರುವ ಪಕ್ಷವು, ಸುಸ್ಥಾಪಿತವಾದಂಥ ಕೆಲವು ಪ್ರಜಾಪ್ರಭುತ್ವ ಕ್ರಮಗಳನ್ನೂ ಪರಂಪರೆಗಳನ್ನೂ ಅನುಸರಿಸುವಂತೆ ನೋಡಿಕೊಳ್ಳುವುದು......... ಅಂಥ ಕ್ರಮ—ಪರಂಪರೆಗಳನ್ನು ಆಳುವ ಪಕ್ಷ ಮುರಿದಾಗ ಅದನ್ನು ಬಯಲಿಗೆ ಎಳೆಯುವುದು........"

ಕಳೆದ ಹನ್ನೊಂದು ವರ್ಷಗಳಲ್ಲಿ ಕಾಂಗ್ರೆಸ್ ಆಳುವ ಪಕ್ಷವಾಗಿ ಅನುಸರಿಸುತ್ತ ಬಂದಿರುವ ಕ್ರಮಗಳಿಗೆ, ಸೃಷ್ಟಿಸಿರುವ ಪರಂಪರೆಗೆ, ಬದಲಾಗಿ ಬೇರೆಯೇ ಕ್ರಮಗಳನ್ನು ಕೇರಳದ ಆಳುವ ಪಕ್ಷವಾದ ಕಮ್ಯೂನಿಸ್ಟ್ ಪಾರ್ಟಿ ಅನುಸರಿಸುತ್ತದೆ. ಅದೊಂದು ಹೊಸ ಪರಂಪರೆಯನ್ನೇ ಸೃಷ್ಟಿಸುತ್ತಿದೆ ಇದರಿಂದ ಸಾದಿಕ್ ಅಲಿಯವರೂ ಅವರ ಪಕ್ಷವೂ ಗೊಂದಲಕ್ಕೆ ಸಿಕ್ಕಿಕೊಂಡಿರುವುದರಲ್ಲಿ ಆಶ್ಚರ್ಯವಿಲ್ಲ.

● ಭೂಸುಧಾರಣೆಯ ಆವಶ್ಯಕತೆಯನ್ನು ಯಾವಾಗಲಾದರೊಮ್ಮೆ ಒತ್ತಿ ಹೇಳುವುದರಲ್ಲೇ ತೃಪ್ತಿಹೊಂದಿ, ಅದನ್ನು ಕಾರ್ಯಕಾರಿಗೊಳಿಸಲು ಕ್ರಮವಹಿಸದಿರುವುದು; ಭೂಮಾಲಿಕರು ರೈತರನ್ನು ಸಾಮೂಹಿಕವಾಗಿ ಒಕ್ಕಲೆಬ್ಬಿಸುವುದನ್ನು ತಡೆಯದೆ ಕಾಲ ಕಳೆಯುವುದು; ರೈತರ ಹೋರಾಟಗಳನ್ನು ಸದೆಬಡೆಯಲು, ಸಂಘಟನೆಗಳನ್ನು ಮುರಿಯಲು ಸರಕಾರದ ದಬ್ಬಾಳಿಕೆಯ ಅಸ್ತ್ರಗಳನ್ನೆಲ್ಲ ಪ್ರಯೋಗಿಸುವುದು ಕಾಂಗ್ರೆಸ್ ಸರಕಾರಗಳ ಕ್ರಮ ಮತ್ತು ಪರಂಪರೆ.

ಒಕ್ಕಲೆಬ್ಬಿಸುವುದನ್ನು ಕಡ್ಡಾಯವಾಗಿ ತಡೆಹಿಡಿದಿರುವುದು, ಸಮಗ್ರ ಭೂಸುಧಾರಣೆಯ ಮಸೂದೆಯನ್ನು ತಯಾರಿಸಿ ಅದಷ್ಟು ಬೇಗನೆ ಜಾರಿಗೆ ತರಲು ಪ್ರಯತ್ನಿಸುತ್ತಿರುವುದು ಕಮ್ಯೂನಿಸ್ಟ್ ಪಾರ್ಟಿಯ ಕ್ರಮ.

● ಕಾರ್ಮಿಕ ವರ್ಗದ ಹೋರಾಟಗಳ ಸಂದರ್ಭದಲ್ಲಿ ಕರಿಗಾಲುಗಳನ್ನು ತರುವುದಕ್ಕೂ, ಹೋರಾಟಗಾರರನ್ನು ಗುಂಡಿಕ್ಕಿ ಕೊಲ್ಲುವುದಕ್ಕೂ ಪೋಲೀಸು ಮತ್ತು ಮಿಲಿಟರಿ ಪಡೆಗಳನ್ನು ಉಪಯೋಗಿಸುವುದು ಕಾಂಗ್ರೆಸ್ಸಿನ ಕ್ರಮ ಮತ್ತು ಪರಂಪರೆ.

ಕಾರ್ಮಿಕರ ಹೋರಾಟಗಳಲ್ಲಿ ಪೋಲೀಸರು ಕೈಹಾಕಬಾರದು, ಲಾಠಿ-ಗುಂಡು ಪ್ರಯೋಗ ಕೂಡದು; ಸರಕಾರಕ್ಕೆ ವಿರೋಧವಾದ ಮತ ಪ್ರದರ್ಶನ ಮತ್ತು ಚಳುವಳಿಗಳು ಕೂಡ ಶಾಂತರೀತಿಯಲ್ಲಿ ನಡೆಯುವವರೆಗೆ ಯಾವುದೇ ತರದ ನಿರ್ಬಂಧವನ್ನೂ ಹೇರಿಸಬಾರದು-ಇದು ಕಮ್ಯೂನಿಸ್ಟ್ ಸರಕಾರ ಅನುಸರಿಸುತ್ತಿರುವ ಕ್ರಮ.

● ಕ್ರಿಮಿ...
ಟಿನ ಸೆ. 1...
ಕೆಯ ಬಗ್ಗೆ...
ಸಭೆ—ಮೆರ...
ರ ಪ್ರಕಾರ ನಿ...
ರಣೆಯಿಲ್ಲದೆ...
ಕಾಂಗ್ರೆಸ್...
ಪರಂಪರೆ.

ಅಂಥ ನಿ...
ಸ ಕೂಡದೆಂ...
ನಿಸ್ಟ್ ಸರಕಾ...

● ಒರಿಸ...
ಪಕ್ಷಕ್ಕೆ ಎಸೆಂ...
ವಾದಾಗ ಬೇ...
ದ ಎಂಸೆಂಬ್ಲಿ...
ಲ್ಲದೆ ಬಂಧಿಸಿ...
ಉಳಿಸಿಕೊಳ್ಳು...
ಮತ್ತು ಪರಂ...
ಸದೆ, ಗವರ್ನ...
ನಾಮೆಯನ್ನು...
ಗ್ರೆಸ್ ಆಡಳ...
ರಿಯುವಂತೆ...
ಕ್ರಮ ಮತ್ತು...

ಎಸೆಂಬ್ಲಿ...
ಬಹುಮತವಿ...
ಗಳ ಹಕ್ಕುಗ...
ಅವರ ಚಲನ...
ಯಾವ ತರದ...
ಡಿಕೊಳ್ಳುವು...
ಕ್ರಮ.

● ಚುನ...
ಲ್ಲೆಲ್ಲ ಮಂತ್ರಿ...
ಮತದಾರ...
ಕಾಂಗ್ರೆಸ್ಸಿಗೆ...
ಬೇಟೆಗೆ ಅ...
ಯೋಗಿಸುವು...
ಗಳನ್ನು ಆಧಿ...
ಮೇದುವಾರ...
ವುದು ಕಾಂಗ್...
ಪರೆ.

ದೇವಿಕುಳ...
ಸಿಕೊಟ್ಟಿರುವ...
ದೊಳಗೆ ಮು...
ರುವುದು, ಬ...
ಹಣ, ವಾಹ...
ಲಾದ ಯಾ...
ಉಪಯೋಗ...
ವಹಿಸುವುದು...
ಕ್ರಮ.

● ರಾ...
ಗ್ಗೆ ಸಲಹೆ...
ಸಾರ್ವಜನಿಕ...
ದ್ದೇಶದಿಂದ...
ಗಳಲ್ಲಾಗಲಿ...
ತುಂಬುವುದ...

ರಿ "

ಸೀಜರ್ ಕೋ
'ಒಳ್ಳೆ ನಡವಳಿ
ಕೇಳುವುದು;
ಲೆ ಸೆ. 114
ವುದು; ವಿಚಾ
ಮಾಡುವುದು ಇವೆಲ್ಲ
ಕ್ರಮ ಮತ್ತು

ಉಪಯೋಗಿ
ವುದು ಕಮ್ಯೂ

ತೆ, ಕಾಂಗ್ರೆಸ್
ಹುಮತ ನಷ್ಟ
ಮುಂದಿ ಪ್ರತಿಪಕ್ಷ
ವಿಚಾರಣೆಯ
ಅಧಿಕಾರವನ್ನು
ಗ್ರೆಸ್ಸಿನ ಕ್ರಮ
ನೆಯನ್ನು ಲಕ್ಷಿ
ಮಂಡಲದ ರಾಜೀ
ತ್ತಿನಲ್ಲಿರಿಸಿ ಕಾಂ
ರೂ ಮುಂದುವ
ದು ಕಾಂಗ್ರೆಸ್ಸಿನ

ಒಂದೇ ಒಂದು
ಕೂಡ ಪ್ರತಿಪಕ್ಷ
ಕೊಡುವುದು,
ಟುವಟಿಕೆಗಳಿಗೆ
ಆಗದಂತೆ ನೋ
ಸ್ಟ್ ಸರಕಾರದ

ನಡೆಯುವಾಗ
ರದ ಖರ್ಚಿನಿಂದ
ಪ್ರವಾಸಮಾಡಿ
ವುದು, ಓಟಿನ
ಲವನ್ನು ಉಪ
ಕಾರದ ವಾಹನ
ಕಾಂಗ್ರೆಸ್ ಉ
ಉಪಯೋಗಿಸು
ಮತ್ತು ಪರಂ

ಯಲ್ಲಿ ತೋರಿ
ವಣೆಯ ಕ್ಷೇತ್ರ
ವಾಸ ಮಾಡದಿ
ಲ್ಲಿ ಸರಕಾರದ
ವರ್ಗ ಮೊದ
ಯಾವ ಪಕ್ಷದ
ದಂತೆ ಎಚ್ಚರಿಕೆ
ಸ್ಟ್ ಪಾರ್ಟಿಯ

ಯೋಜನೆಗಳ ಬ
ತಿಗಳಲ್ಲಾಗಲಿ,
ಪಡೆಯುವ ಉ
ಇತರ ಸಮಿತಿ
ಗ್ರೆಸ್ಸಿನವರನ್ನೇ
ತಿಪಕ್ಷಗಳ ಮ

ಷ್ಯವಾಗಿ ಕಮ್ಯೂನಿಸ್ಟ್ ಪಾರ್ಟಿಯ— ಪ್ರತಿನಿಧಿಗಳನ್ನು ಸೇರಿಸಿಕೊಳ್ಳದಿರುವುದು ಕಾಂಗ್ರೆಸ್ ಸರಕಾರಗಳ ಕ್ರಮ ಮತ್ತು ಪರಂಪರೆ.

ಪ್ರತಿಯೊಂದು ಸಮಿತಿಯಲ್ಲೂ ಎಲ್ಲಾ ಪಕ್ಷಗಳಿಗೆ ಸರಿಯಾದ ಪ್ರಾತಿನಿಧ್ಯ ಕೊಡುವುದು, ಸಮಿತಿಗಳ ಸಲಹೆಗಳಿಗೆ ಗೌರವ ಕೊಡುವುದು, ಕಮ್ಯೂನಿಸ್ಟ್ ಸರಕಾರದ ಕ್ರಮ.

ಕೇರಳದ ಪ್ರತಿಪಕ್ಷಗಳ ವಿಚಿತ್ರ ವರ್ತನೆಯ ಉದ್ದೇಶವೇನೆಂದು ಸಾದಿಕ್ ಅಲಿಯವರ ಮಾತುಗಳು ಸ್ಪಷ್ಟಪಡಿಸುತ್ತವೆ. ಅದಕ್ಕೆ ಅವರಿಗೆ ಅಭಿನಂದನೆಗಳು.

—ಚಾಣಕ್ಯ

ಸಮಾಜವಾದೀ ರಾಷ್ಟ್ರಗಳೊಂದಿಗೆ ವಾಣಿಜ್ಯ ಸಂಬಂಧ

ಅಮೇರಿಕದ ಗೊಂದಲ

(ಅಮೇರಿಕದ ಪತ್ರಕರ್ತ ವಾಲ್ಟರ್ ಲಿಪ್‌ಮನ್‌ರವರ ದೃಷ್ಟಿಕೋನ)

ಕಮ್ಯೂನಿಸ್ಟ್ ರಾಷ್ಟ್ರಗಳೊಡನೆ ಈಗಿರುವ ನೀತಿಯಲ್ಲಿ ಏನಾದರೂ ಬದಲಾವಣೆ ಮಾಡಬೇಕೆ ಹೇಗೆ ಎಂಬುದು ಇದೀಗ ಅಮೇರಿಕೆಯ ತಲೆ ತಿನ್ನುತ್ತಿರುವ ಪ್ರಶ್ನೆ. ಇತ್ತೀಚೆಗೆ ಸೆನೇಟ್‌ನಲ್ಲಿ ಪ್ರಾಸಂಗಿಕವಾಗಿ ಈ ವಿಷಯ ಚರ್ಚೆಗೆ ಬಂದಿತ್ತು. ಅಮೇರಿಕೆಯು ತನ್ನ ನೀತಿಯನ್ನು ಪುನರ್ವಿಮರ್ಶಿಸುವುದು ಈಗ ಅನಿವಾರ್ಯವಾಗುತ್ತಿದೆ. ಕಮ್ಯೂನಿಸ್ಟ್ ವ್ಯವಸ್ಥೆಯಲ್ಲಿ ರಾಷ್ಟ್ರವು ಭದ್ರವೂ ಪ್ರಗತಿಪರವೂ ಆಗುವುದೋ ಅಥವಾ ಬಂಡವಾಳಶಾಹೀ ವ್ಯವಸ್ಥೆಯಲ್ಲಿ ಆಗುವುದೋ ಎಂಬ ಸ್ಪರ್ಧೆ ಅಮೇರಿಕೆಗೆ ದೊಡ್ಡದೊಂದು ಸತ್ವ ಪರೀಕ್ಷೆಯೇ ಈಗ.

ಕಮ್ಯೂನಿಸ್ಟ್ ರಾಷ್ಟ್ರಗಳೊಂದಿಗೆ ಆರ್ಥಿಕ ಹಾಗೂ ವಾಣಿಜ್ಯ ಸಂಬಂಧಗಳನ್ನು ಬೆಳೆಸಿದರೆ ಕಮ್ಯೂನಿಸ್ಟ್ ರಾಷ್ಟ್ರಗಳು ಬಲಗೊಳ್ಳುವವು ಎಂಬುದಾಗಿ ಸೆನೇಟರ್‌ರೊಬ್ಬರ ಅಭಿಪ್ರಾಯ. ಆರ್ಥಿಕ ವ್ಯವಹಾರಗಳು ನಡೆದರೆ ಕಮ್ಯೂನಿಸ್ಟ್ ರಾಷ್ಟ್ರಗಳು ತಮ್ಮ ಸೈನಿಕ ಶಕ್ತಿಯನ್ನು ಬಲಗೊಳಿಸುವ ಕಡೆಗೆ ಗಮನ ಕೊಡುವವು. ಆದಾಗ ಕೂಡದು. ತಮ್ಮ ರಕ್ಷಣೆಗಾಗಿ ಹೇಗೂ ಅವರು ಸೈನಿಕ ಶಕ್ತಿಯ ಬಲ ಸಂವರ್ಧನೆಗೆ ಹೆಚ್ಚು ಗಮನ ಕೊಡಲೇ ಬೇಕಾಗುವುದರಿಂದ ಜನರ ಜೀವನದತ್ತ ಅವರು ಅಷ್ಟಾಗಿ ಗಮನ ಕೊಡಲಿಕ್ಕಾಗದೆಂದೂ ಆಗ ಜನರಲ್ಲಿ ಅಸಂತೃಪ್ತಿ ಬೆಳೆಯುವುದೆಂದೂ ಅವರ ಅಭಿಪ್ರಾಯ.

ಇದು ಸೆನೆಟರ್ ನೋಲಾಂಡ್‌ರ ಅಭಿಪ್ರಾಯ-ತತ್ವ. ಈ ತತ್ವವನ್ನೇ ಕಮ್ಯೂನಿಸ್ಟ್ ಚೀನಾಕ್ಕೆ ಅನ್ವಯಿಸಲಾಗಿದೆ ಹಿಂದೆ ಸೋವಿಯತ್ ರಷ್ಯಕ್ಕೂ ಅನ್ವಯಿಸಲಾಗಿತ್ತು. ಆದರೆ ಅಮೇರಿಕೆಯು ಚೀನಾದ ವಿಷಯದಲ್ಲಿ ಈ ತತ್ವವನ್ನು ಅತ್ಯಂತ ಕಠೋರವಾಗಿ ಪಾಲಿಸಿಕೊಂಡು ಬಂದಿದೆ.

ಈ ತತ್ವವ್ಯಾವಹಾರಿಕವಾಗಿದ್ದರೆ, ಪರಿಣಾಮಕಾರಿಯಾದ ಅಸ್ತ್ರವಾಗಿದ್ದರೆ ಸೋವಿಯತ್ ರಷ್ಯದ ಆರ್ಥಿಕ ವ್ಯವಸ್ಥೆಯಲ್ಲಿ ಭೀಕರ ಪರಿಣಾಮವೇ ಆಗಿರಬೇಕು.

ಆದರೆ ವಾಸ್ತವಿಕವಾಗಿ ಆದ್ದದ್ದೇನು?

ರಷ್ಯದ ಆರ್ಥಿಕ ವ್ಯವಸ್ಥೆ ಚಕಿತಗೊಳಿಸುವಷ್ಟು ಅಭಿವೃದ್ಧಿಗೊಂಡಿದೆ. ಅಮೇರಿಕೆಯು ರಷ್ಯಕ್ಕೆ ಹಾಕಿರುವ ಬಹಿಷ್ಕಾರದಿಂದ ಅವರ ಆರ್ಥಿಕಾಭಿವೃದ್ಧಿಯು ನಿಧಾನವಾಗಿರಬಹುದು, ಈ ನಿರ್ಬಂಧಗಳಿದ್ದಾಗ್ಯೂ ರಷ್ಯಾ ಅತ್ಯಂತ ಬಲಿಷ್ಠವಾಗಿಯೇ ಬೆಳೆಯಿತು. ಅಮೇರಿಕೆಯ ವಿದೇಶಾಂಗ ವ್ಯವಹಾರ ಶಾಖೆಯೇ ಹೀಗೆ ಹೇಳುತ್ತದೆ: "ಈ ಎಲ್ಲ ನಿರ್ಬಂಧಗಳಿದ್ದಾಗ್ಯೂ ಸೋವಿಯತ್ ರಷ್ಯವು ಅತ್ಯಂತ ಬಲಶಾಲಿಯಾದ ಸೈನಿಕ ಶಕ್ತಿಯನ್ನು ಹೊಂದಿರುವ ರಾಷ್ಟ್ರವಾಗಿದೆ. ವಾಣಿಜ್ಯ ಮತ್ತು ಆರ್ಥಿಕ ನೆರವುಗಳನ್ನು ಹಿಂದುಳಿದ ರಾಷ್ಟ್ರಗಳಿಗೆ ನೀಡುವುದರಲ್ಲೂ ಅದು ದುರ್ದಮವಾದ ರಾಷ್ಟ್ರವಾಗಿದೆ. ಅದನ್ನು ಆಹ್ವಾನಿಸುವವರೇ ಇಲ್ಲ."

ಈ ಬಹಿಷ್ಕಾರದ ತತ್ವದಿಂದ ಕಮ್ಯೂನಿಸ್ಟ್ ನಿರ್ಮಾಣ, ಅಭಿವೃದ್ಧಿಗಳು ನಿಧಾನವಾಗಿರಬಹುದು, ತಲ್ಲಣಿಸಿರಬಹುದು. ಆದರೆ ಈ ತತ್ವ ಕಾರ್ಯಗತವಾಗಿಲ್ಲ ಎಂಬುದೇ ಸತ್ಯ ಮತ್ತು ಮುಖ್ಯ.

ಬ್ರಿಟನ್ನು ಈ ಬಹಿಷ್ಕಾರದ ನೀತಿಯಲ್ಲಿ ಹಿಂದೆಲ್ಲ ಯಶಸ್ವಿಯಾಗಿತ್ತು. ಸಮುದ್ರದ ಮೇಲೆ ಅದಕ್ಕೆ ಒಡೆತನವಿದ್ದಾಗ ಜರ್ಮನಿಯನ್ನು ಹತೋಟಿಗೆ ತಂದಿತ್ತು. ಅಮೇರಿಕೆಯೂ ಜಪಾನ್ ವಿಷಯದಲ್ಲಿ ಯಶಸ್ವಿಯಾಗಿತ್ತು. ಅದು ಹಿಂದಿನ ಸೈನಿಕ ರೀತಿನೀತಿಗಳಲ್ಲಿ ಮಾತ್ರ ಸಾಧ್ಯವಾಗಿತ್ತು.

ಆದರೆ ಯುರೋಪಿನ ಮಧ್ಯಸ್ಥಾನದಿಂದ ಆರಂಭವಾಗಿ ಶಾಂತ ಸಾಗರದವರೆಗೂ ಹಬ್ಬಿರುವ ರಷ್ಯಾ ಹಾಗೂ ಚೀನಾಗಳ ಈ ಮಹಾ ಭೂಪ್ರದೇಶಕ್ಕೆ ಬಹಿಷ್ಕಾರದ ಆಟ ನಡೆಯದು ಎಂಬುದೀಗ ಅವರಿಸ ಖಾತ್ರಿಯಾಗಿದೆ. ಅಗಣಿತವಾದ ಭೂಸಂಪತ್ತು, ಪ್ರಚಂಡವಾದ ಜನಶಕ್ತಿ ಮತ್ತು ಶಕ್ತಿವಂತ ಸರಕಾರ ಇಂಥದಕ್ಕೆ ಬಹಿಷ್ಕಾರ ಹಾಕುವುದು ಸಂಪನ್ನತೆ ವೈಭವತೆಗಳ ಅಮೆರಿಕೆಯ ಹುಚ್ಚು ಭ್ರಮೆ. ನೋಲಾಂಡ್‌ರ ತತ್ವ ವ್ಯಾವಹಾರಿಕದಲ್ಲಿ ಕೆಲಸ ಮಾಡಲಿಲ್ಲ. ಯಾಕೆಂದರೆ ಅದು ಕೇವಲ ಜೀವನ ಸತ್ಯವನ್ನು ಮರೆತು ಕೆಟ್ಟ ಯೋಚನೆಯಾಗಿತ್ತು ಅಷ್ಟೆ.

ಸೋವಿಯತ್ ರಷ್ಯ ನೀಡಿರುವ ಆರ್ಥಿಕ ಆಹ್ವಾನಗಳು ವಿಶಿಷ್ಟವಾಗಿವೆ. ಕ್ಲಿಷ್ಟವಾಗಿವೆ, ಇಷ್ಟೇ ಅಲ್ಲ ನೂತನವಾಗಿವೆ. ಅಮೆರಿಕೆಯು ಇಂಥವುಗಳೊಡನೆ ಹಿಂದೆಂದೂ ವ್ಯವಹರಿಸಿರಲಿಲ್ಲ. ಅಂತೆಯೇ ಕಮ್ಯೂನಿಸ್ಟ್ ಆರ್ಥಿಕ ಸ್ಪರ್ಧೆ ಕಮ್ಯೂನಿಸ್ಟೇತರ ರಾಷ್ಟ್ರಗಳಿಗೆ ನೀಡಿರುವ ಕಠಿಣವಾದ ಪರೀಕ್ಷೆ. ಇದಕ್ಕೆ ಸುಲಭವಾದ ಅಥವಾ ಸಿದ್ಧವಾದ ಉತ್ತರವೇ ಇಲ್ಲ!

('ಹಿಂದೂ' ಪತ್ರಿಕೆಯ ಋಣ.)

ಚೀನೀಯರ ಆದರ್ಶ ಶ್ರಮದಾನ

ಶ್ರಮದಾನದ ಬಗ್ಗೆ ನಮ್ಮ ದೇಶದಲ್ಲಿಯೂ ಬೇಕಾದಷ್ಟು ಪ್ರಚಾರ ಪಡೆಯುತ್ತಿದೆ. ಮಂತ್ರಿಗಳು, ದೊಡ್ಡ ನಾಯಕರು ಈ ಕಾರ್ಯದಲ್ಲಿ ಭಾಗವಹಿಸಿದರೂ, ಕೇವಲ ಪ್ರಚಾರಕ್ಕಾಗಿ ಆಗಿದೆ ಅಷ್ಟೆ. ಆದರೆ ಚೀಣದಲ್ಲಿ ಹಾಗಲ್ಲ, ಶ್ರಮದಾನ ಎಂದರೆ ಎಲ್ಲರೂ ಭಾಗವಹಿಸಿ ನಿಜವಾಗಿ ದುಡಿಯುವುದು.

ಪ್ರತ್ಯಕ್ಷವಾಗಿ ಜನತೆಯೊಂದಿಗೆ ದುಡಿಯುವ ಸ್ವಾರಸ್ಯಕರ ವರದಿಯೊಂದು ನವಚೀನಾದಿಂದಬಂದಿದೆ.

ಚೀಣಾದ ಪ್ರಧಾನಿ 56 ವರುಷದ ಚೌ-ಎನ್-ಲ್ಯಾ ಮತ್ತು ಇನ್ನಿತರ ಉನ್ನತ ಮಟ್ಟದ ಅಧಿಕಾರಿಗಳು ಇತ್ತೀಚೆಗೆ ರಚನಾತ್ಮಕ ಕಾರ್ಯಗಳಲ್ಲಿ ತೊಡಗಿ ಕಾರ್ಮಿಕರೊಂದಿಗೆ ಒಂದು ವಾರ ಕಳೆದರು.

ಮಿಂಗ್ ಟಾಂಬ್ ಅಣೆಕಟ್ಟಿನ ರಚನೆಯಲ್ಲಿ ಸುಮಾರು 540ಕ್ಕೂ ಹೆಚ್ಚು ಸಂಖ್ಯೆಯಲ್ಲಿ ಕೇಂದ್ರ ಸರ್ಕಾರದ ಸಚಿವರು, ವಿವಿಧ ಶಾಖೆಯ ಪರಿಷ್ಟಾಧಿಕಾರಿಗಳು, ಕಮ್ಯೂನಿಸ್ಟ್ ಪಕ್ಷದ ಕಾರ್ಯಕರ್ತರು ತೊಡಗಿದ್ದರು.

ಈ ಶ್ರಮದಲ್ಲಿ ತೊಡಗಿದ ಮೊದಲನೆಯ ತಂಡ ಶೇ. 40ರಷ್ಟು ಕೆಲಸವನ್ನು ಪೂರೈಸಿತು. ಎರಡನೆಯ ತಂಡ ಇನ್ನೂ ಕಾರ್ಯ ಮಾಡುತ್ತಿದೆ.

ಇಲ್ಲಿಗೆ ದುಡಿಯಲು ಬಂದ ಇವರೆಲ್ಲ ಹುಲ್ಲ ಹಾಸಿಗೆಗಳ ಮೇಲೆ ತಮ್ಮ ರಾತ್ರಿಯ ವಿಶ್ರಾಂತಿಯನ್ನು ಪಡೆದರು. ಅಲ್ಲಿರುವ ತಾತ್ಪೂರಿಕ ಹೋಟೆಲುಗಳಲ್ಲಿ ಊಟ, ತಿಂಡಿ ಮುಂತಾದವುಗಳನು ಬಗೆ ಹರಿಸಿದರು.

ಮೊದಲ ದಿನ ಸುಡುತ್ತಿರುವ ಮಧ್ಯಾಹ್ನದ ಸೂರ್ಯನ ಬಿಸಿಲಿನಲ್ಲಿ ಕಾಂ|| ಚೌ-ಎನ್-ಲ್ಯಾ ಮತ್ತು ಸಂಗಾತಿಗಳು ನಾಲ್ಕು ಕಿಲೋಮೀಟರುಗಳಷ್ಟು ದಾರಿಯನ್ನು ಕ್ರಮಿಸಿ ಕಾರ್ಯಕ್ಷೇತ್ರಕ್ಕೆ ಬಂದರು. ರಾತ್ರಿ 11 ಗಂಟೆಯ ವರೆಗೂ ಅವರು ಕೆಲಸ ಮಾಡಿದರು. ಸಾಯಂಕಾಲ 6 ಗಂಟೆಗೆ ಸಾದಾ ತರಕಾರಿಗಳನ್ನು ಮಾತ್ರ ಅವರೂ ಅಲ್ಲಿಯ ವಿಧಿಯಂತೆ ಸೇವಿಸಿ ತಮ್ಮ ಉಪಹಾರ ಮುಗಿಸಿದರು.

ಪಾಳಿ ಬದಲಾವಣೆಯ ಕಾಲಕ್ಕೆ ಈ "ಸ್ವಯಂ ಸೇವಕರು" ಒಂದೆಡೆ ಸೇರಿ ಅಂದು ನಡೆದ ಕಾರ್ಯದ ಬಗ್ಗೆ ಚರ್ಚಿಸಿದರು ಮತ್ತು ತಮ್ಮ ಬಟ್ಟೆ ಬರೆಗಳನ್ನು ಒಗೆದುಕೊಂಡರು.

ತಮ್ಮ ತಂಡದೊಂದಿಗೆ ಕೆಲಸಕ್ಕೆ ಆಗಮಿಸಿದಾಗ ಕಾಂ|| ಚೌ-ಎನ್-ಲ್ಯಾರವರೆ ಪ್ರಥಮವಾಗಿ ಕೆಲಸವನ್ನಾರಂಭಿಸಿದರು. ಚೌ ಮೂರು ದಿನಗಳ ಕಾಲ ಅವಿಶ್ರಾಂತವಾಗಿ ದುಡಿದರು. ಅವರು ಕಲ್ಲುಗಳನ್ನು ಹೊತ್ತು ಸಾಗಿಸಿದರು. ಕಲ್ಲು ತುಂಬಿದ ಬಂಡಿಗಳನ್ನು ನೂಕುವಲ್ಲಿ ನೆರವಾದರು.

ಜೂನ್ 22ರಂದು ಕಲ್ಲಿನೇಟು ಬಿದ್ದು ಬೆರಳುಗಳು ಜಬ್ಬಿ ಹೋದವು. ಅವರಿಗೆ ಯಾರೋ "ಕೊಂಚ ವಿಶ್ರಾಂತಿ ತಗೋಬೇಕು" ಎಂದು ಹೇಳಿದಾಗ ಚೌ ಹೇಳಿದರು :

"ಸಾಮೂಹಿಕ ಶ್ರಮದಲ್ಲಿ ಮುಖ್ಯ ಮಂತ್ರಿ, ಸಚಿವರು, ಸಚಿವ ಶಾಖೆಗಳ ವರಿಷ್ಟಾಧಿಕಾರಿಗಳು ಎಂಬ ವ್ಯತ್ಯಾಸವೇ ಇಲ್ಲ. ರಚನಾತ್ಮಕ ಕಾರ್ಯದಲ್ಲಿ ಎಲ್ಲರೂ ಸಾದಾ ಕೂಲಿಗಳು !"

ಕಾಂ|| ಚೆನ್ ಯೂನ್ ಆಗಮಿಸಿದಂದಿನಿಂದ ಹೆಚ್ಚು ದುಡಿದರು. ಬಂಡಿಗಳನ್ನು ಹೊಡಿಕೊಂಡು ಹೋಗುವುದು ಅವರಿಗೆ ತುಂಬ ಪ್ರೀತಿಯ ವಿಷಯವಾಗಿತ್ತು. ಕಾಂ|| ಷಿ-ಚೂಂಗ್-ಯೂನ್ ಹೊಲಗಳಲ್ಲಿ ದುಡಿದರು.

ಸಾರ್ವಜನಿಕ ಆರೋಗ್ಯ ಶಾಖಾ ಸಚಿವೆ ಲೀ-ಟೇ-ಚೂ-ಆನ್ ದುಡಿಯುತ್ತ ದುಡಿಯುತ್ತ ತಮ್ಮ ಜೊತೆಗಾರರಿಗೆ ಆರೋಗ್ಯದ ಬಗ್ಗೆ ಎಚ್ಚರಿಕೆ ಹೇಳದಿರಲಿಲ್ಲ. ಸೂಂಗೂ-ಜೆನ್-ಚೀಯುಂಗ್, ವಾಂಗ್-ಷೂ-ತಾವೊ, ಯಾಂಗ್-ಷೀನ್-ಮುಂತಾದವರು ಕಲ್ಲು ಹೇರುವುದರಲ್ಲೂ ಗಾಡೀ ಹೊಡೆಯುವದರಲ್ಲೂ ತುಂಬಾ ಆಸಕ್ತಿವಹಿಸಿ ಕೆಲಸ ಮಾಡಿದರು.

ದುಡಿಮೆಗೆ ಬಂದಿದ್ದ ಮೊದಲನೆಯ ತಂಡದವರ ಸರಾಸರಿ ವಯಸ್ಸು 45ಕ್ಕೂ ಹೆಚ್ಚಿತ್ತು. ಆದರೆ ಅವರು ತುಂಬಾ ಕೆಲಸ ಮಾಡಿದರು. ಒಂದು ವಾರಕ್ಕೆ ಎಷ್ಟು ಕೆಲಸವಾಗಬೇಕೆಂದು ಸೂಪರ್‌ವೈಜರರಿಂದ ನಿಗದಿಯಾಗಿತ್ತೋ ಅಷ್ಟನ್ನು ಪೂರ್ಣಗೊಳಿಸಿದರು. 260 ಕ್ಯೂಬಿಕ್ ಮೀಟರ್‌ನಷ್ಟು ಕಲ್ಲುಗೆಲಸವನ್ನು ೨ ದಿನಗಳಲ್ಲಿ ಮುಗಿಸಿದರು. ಆ ಮೇಲೆ ನಿಗದಿಯಾದ ಕೆಲಸವನ್ನು 580ಕ್ಕೆ ಕ್ಯೂಬಿಕ್ ಮೀಟರುಗಳಿಗೇರಿಸಲಾಯಿತು. ಆದರೆ ಈ ಕಾರ್ಯ ಕೂಡ ವಾರಾಂತ್ಯದಲ್ಲಿ ಪೂರ್ಣವಾಗಿ ಶೇ. ೪೮ರಷ್ಟು ಹೆಚ್ಚಾಗಿತ್ತು !

ಎರಡನೆಯ ತಂಡದವರು ಬಂದ ಮೊದಲನೆಯ ದಿನವೇ ಪ್ರತಿಯೊಬ್ಬರು ಸರಾಸರಿಯಾಗಿ 1,450 ಕಲ್ಲುಗಳನ್ನು ಸಾಗಿಸಿದರು. ಇನ್ನೊಂದು ತಂಡದವರು ಕೆಲಸ ಮಾಡುತ್ತಲೇ ವಿಶ್ರಾಂತಿಯ ಕಾಲದಲ್ಲಿ ಹಾಡು ನೃತ್ಯಗಳನ್ನು ಏರ್ಪಡಿಸಿಕೊಂಡಿದ್ದರು. ಅಡಿಗೆಯ ತಂಡದವರು ದುಡಿಮೆಯ ಜಾಗಕ್ಕೆ ಊಟವನ್ನು ಪೂರೈಸಿದರು. ಅದೇ ಕಾಲಕ್ಕೆ ಅನೇಕ ಭಿತ್ತಿ ವೃತ್ತಪತ್ರಿಕೆಗಳನ್ನು ಅಂಟಿಸಿ ಕೆಲಸದ ಸರ್ವ ಸಮಾಚಾರಗಳನ್ನು ತಿಳುಹಿಸಲಾಗುತ್ತಿತ್ತು.

ಜೂನ್ ೯ರ ವರೆಗೆ ಒಟ್ಟು 317,000ಕ್ಕೂ ಹೆಚ್ಚು ಜನರು ಸ್ವಯಂಸೇವಕರಾಗಿ ದುಡಿದರು. ಈ ಅಣೆಕಟ್ಟಿನಿಂದ 66,000 ಹೆಕ್ಟರ್ ಭೂಮಿ ನೀರುಣ್ಣುವುದು. ಈ ಅಣೆಕಟ್ಟಿನಲ್ಲಿ ಮಣ್ಣಿನ ಕಾರ್ಯವೆಲ್ಲ ಮುಕ್ತಾಯವಾದಂತಾಗಿದೆ.

ಪ್ರಜಾಪ್ರಭುತ್ವದ ಮುನ್ನಡೆಯಲ್ಲಿ ಕೇರಳ

ಎನ್. ಜಿ. ಓ.ಗಳಿಗೂ ಪ್ರವಾಸ ಭತ್ತೆ

ಕೇರಳ ಸರಕಾರವು ಆಜ್ಞೆಯೊಂದನ್ನು ಹೊರಡಿಸಿ ಇನ್ನೂ ನೌಕರಿಯಲ್ಲಿರುವ ಎನ್. ಜಿ. ಓ.ಗಳಾರಾದರೂ ಕಾಲವಾದರೆ ಅವರ ಕುಟುಂಬದವರಿಗೆ ಪ್ರವಾಸದ ಭತ್ತೆಯನ್ನು ಕೊಡುವದಾಗಿ ಸಾರಿದೆ.

ನಾನ್‌ಗೆಜೆಟೆಡ್ ಅಧಿಕಾರಿಗಳಾರಾದರೂ ಇನ್ನೂ ಸೇವೆಯಲ್ಲಿರುವಾಗಲೇ ಮೃತರಾದರೆ ಅವರ ಕುಟುಂಬದವರು ತಮ್ಮ ಮನೆಗಾಗಲಿ, ಅಥವಾ ತಾವು ವಾಸಮಾಡುವ ಸ್ಥಳಕ್ಕಾಗಲಿ, ಹೋಗುವ ಖರ್ಚಿಗಾಗಿ ಸರ್ಕಾರಿ ನೌಕರನು ತನ್ನ ಮನೆಗೆ ತೆರಳುವದಕ್ಕಾಗಿ ಬರಬಹುದಾದ ಹಣಕ್ಕೆ ದೊರೆತಿರುವ ಮಂಜೂರಾತಿಗಿಂತಲೂ ಹೆಚ್ಚಾಗಿ ಮಾತ್ರ ಈ ಹಣ ಇರುವುದಿಲ್ಲ.

ಕಾಂಗ್ರೆಸ್ ಮತ್ತು ಪಿ.ಎಸ್. ಪಿ.ಯವರು ಕಲಿತಾರೆಯೆ ?

ಶ್ರೀ ಪಿ.ಎಸ್. ನಟರಾಜನ್‌ಪಿಳ್ಳೆ ಅವರು ಮಾಜೀ ಕಾಂಗ್ರೆಸ್ ಹಾಗೂ ಪಿ. ಎಸ್. ಪಿ.ಯ ಪ್ರಭಾವೀ ಮುಖಂಡರು, ಮತ್ತು ತೀವ್ರ ಕಮ್ಯೂನಿಸ್ಟ್ ವಿರೋಧಿಗಳು, ಹಾಗೂ ಕೇರಳದ ಕಮ್ಯೂನಿಸ್ಟ್ ಸರಕಾರದ ನೀತಿ ಧೋರಣೆಗಳನ್ನು ಬಹಿರಂಗವಾಗಿ ಕಟುವಾಗಿ ಟೀಕಿಸುವವರು. ದೇವಿಕುಲಂನಲ್ಲಿ ಕಮ್ಯೂನಿಸ್ಟ್ ಉಮೇದುವಾರರು ವಿಜೇತರಾದ ಸಂದರ್ಭದಲ್ಲಿ ಶ್ರೀ ನಟರಾಜನ್ ಕೆಳಗಿನಂತೆ ಸವಾಲು ಹಾಕಿದರು :

"ನನ್ನ ಅಭಿಪ್ರಾಯದಲ್ಲಿ ಕಳೆದ ಒಂದು ವರುಷದಿಂದ ಕಾಂಗ್ರೆಸ್ಸು ಅಥವಾ ಪಿ. ಎಸ್. ಪಿ. ಯಾವುದೂ ತನ್ನ ಕಾರ್ಯವನ್ನು ಸರಿಯಾಗಿ ಮಾಡುತ್ತಿಲ್ಲ. ಅಧಿಕಾರ ಸ್ಥಾನಗಳನ್ನು ಹೇಗೋ ಪಡೆದುಕೊಳ್ಳಲು ಮಾತ್ರ ಅವರು ಯತ್ನಿಸಿದ್ದಾರೆ. ಅವರು ಮಾಡಿದ ಮಹಾಕಾರ್ಯವೆಂದರೆ ವಿನಾಶಕಾರಿಯಾದ ಟೀಕೆಗಳಲ್ಲಿ ಮುಳುಗಿದುದು...."

"ಇಂದು ನಮಗೆ ಅಗತ್ಯವಾಗಿರುವುದು ಸದ್ಯದ ಸರಕಾರವನ್ನು ರಚನಾತ್ಮಕ ಟೀಕೆಯಿಂದ ಗಮನಿಸುವದಾಗಿದೆ, ಮತ್ತು ಆರ್ಥಿಕ ಚಟುವಟಿಕೆಗಳಿಗಾಗಿ ಜನತೆಯನ್ನು ಸಂಘಟಿಸುವದಾಗಿದೆ...."

ಕಾರ್ಮಿಕರಿಗೆ ವಿಶೇಷ ಪ್ರಾಶಸ್ತ್ಯ

"ದುಡಿಯುವ ವರ್ಗದ ಕಲ್ಯಾಣ ಸಾಧನೆಯೇ ಕೇರಳ ಸರಕಾರದ ಪ್ರಥಮ ಯೋಜನೆ" ಎಂಬುದಾಗಿ ಅಬ್ಕಾರಿ ಸಚಿವೆ ಶ್ರೀಮತಿ ಕೆ. ಆರ್. ಗೌರಿ ಅವರು ಅಲೆಪ್ಪಿಯಲ್ಲಿ ಮಾತನಾಡುತ್ತ ಇತ್ತೀಚೆಗೆ ಹೇಳಿದ್ದಾರೆ. ಔದ್ಯೋಗಿಕ ಕ್ಷೇತ್ರಗಳಲ್ಲಿ, ವ್ಯವಸ್ಥಾಪಕ ವಿಭಾಗದಲ್ಲಿ ಕಾರ್ಮಿಕರಿಗೂ ಭಾಗಶಃ ಅವಕಾಶ ಕಲ್ಪಿಸಿಕೊಡುವುದೇ ಇಂದು ಅಲ್ಲಿ ಪ್ರಮುಖ ಗುರಿಯಾಗಿದೆ ಎಂಬುದಾಗಿ ಶ್ರೀಮತಿ ಗೌರಿಯವರು ವಿವರಣೆ ಕೊಡುತ್ತ ಹೇಳಿದರು.

ಈ ದೆಸೆಯಲ್ಲಿ ಈಗಾಗಲೇ ಪ್ರಯೋಗ ನಡೆದಿದೆ. ಉದಾ : ಅಬ್ಕಾರಿ ಹಕ್ಕುಗಳನ್ನು ಗುತ್ತಿಗೆದಾರರಿಗೆ ಹರಾಜಿನಲ್ಲಿ ಈಗ ಮಾರುವುದಿಲ್ಲ. ಸೇಂದಿ ತೆಗೆಯುವ ಕೆಲಸಗಾರರ ಸಹಕಾರಿ ಸಂಸ್ಥೆಗಳಿಗೆ ಈ ಹಕ್ಕುಗಳನ್ನು ಇದೀಗ ಕೆಲವು ಜಿಲ್ಲೆಗಳಲ್ಲಿ ಕೊಡಲಾಗಿದೆ.

ಪಾನನಿರೋಧದಿಂದ ಎಲ್ಲಾ ಪ್ರಾಂತ್ಯಗಳಲ್ಲೂ ನಷ್ಟವೇ ಆಗುತ್ತಿರುವಾಗ ಕೇರಳದಲ್ಲಿ ಕಮ್ಯೂನಿಸ್ಟ್ ಸರಕಾರ ಬಂದಾಕ್ಷಣಕ್ಕೆ ಆಗಲಾರದು ಎಂದು ಹೇಳುವುದು ಸರಿಯಲ್ಲ. ಅಲ್ಲಿ ಹಿಂದಿನ ಕಾಂಗ್ರೆಸ್ ಸರ್ಕಾರವೂ ನಷ್ಟವನ್ನು ಎದುರಿಸಿಯೇ ಎದುರಿಸಿದೆ. ಆದರೆ ಕೇರಳ ಸರ್ಕಾರವು ಅಬ್ಕಾರಿ ಶಾಖೆಯಲ್ಲಿಯ ಹಿನ್ನಡೆಗಳನ್ನು ತೊಲಗಿಸಲು ಇದೀಗ ಯತ್ನಿಸುತ್ತಿದೆ. ಸೇಂದಿ ಇಳಿಸುವದಕ್ಕಾಗಿ ಸೇಂದಿ ಇಳಿಸುವವರ ಸಂಘಗಳಿಗೆ ವಿಶೇಷ ಪ್ರಾಶಸ್ತ್ಯ ನೀಡುವದು ನ್ಯಾಯವೆಂದೂ ಸರ್ಕಾರ ಯೋಚಿಸಿದೆ.

ಹೀಗೆ ಕ್ರಮೇಣ ಎಲ್ಲಾ ಔದ್ಯೋಗಿಕ ರಂಗಗಳಲ್ಲೂ ವ್ಯವಸ್ಥಾಪಕ ವರ್ಗದಲ್ಲಿ ಕಾರ್ಮಿಕರಿಗೆ ಸರಕಾರ ಅವಕಾಶ ಕಲ್ಪಿಸಿಕೊಟ್ಟು, ಉದ್ಯಮಾಭಿವೃದ್ಧಿಗೆ ಅಗತ್ಯವಾಗಿರುವ ಸಹಕಾರ, ಸಾಮರ್ಥ್ಯಗಳನ್ನು ಸಂಪಾದಿಸಲು ಯತ್ನಿಸುತ್ತಿದೆ.

ಹೆಸರಿಲ್ಲದ ಕೂಲಿಗಳಿಗೆ ಕೂಡ.......

ಪಬ್ಲಿಕ್ ವರ್ಕ್ಸ್ ಮತ್ತು ರಸ್ತೆ ಮುಂತಾದವುಗಳಲ್ಲಿ ದುಡಿಯುವ ಮಸ್ಟರ್ ಹಾಜರಿಯಲ್ಲಿರದಿರುವ ದುಡಿಮೆಗಾರರಿಗೆ ಕೂಡ ಕೇರಳ ಸರಕಾರ ಒಂದು ವ್ಯವಸ್ಥೆಯನ್ನು ಕೈಗೊಳ್ಳುತ್ತಿದೆ.

ಈ ಆಜ್ಞೆಯ ಪ್ರಕಾರ ಮಸ್ಟರ್ ಹಾಜರಿಯಲ್ಲಿಲ್ಲದ ಹಾಗೂ ಗ್ಯಾಂಗ್ ಮಜದೂರರ ಸಂಬಳ ರೂ. 1.75ಕ್ಕೆ ಏರುತ್ತದೆ. ಅನಾರೋಗ್ಯಕಾರಿಯಾದ, ಹಾಗೂ ಘಟ್ಟದ ಪ್ರದೇಶದಲ್ಲಿ ಕೆಲಸ ಮಾಡುವ ಕಾರ್ಮಿಕರಿಗೆ ವಿಶೇಷ ಭತ್ತೆ ದೊರಕುವುದು. ಕೂಲಿಯವರಿಗೆ ವರುಷಕ್ಕೆ 15 ದಿನಗಳ ಗ್ರ್ಯಾಜುಯಿಟಿ ದೊರೆಯುವದು. ಕೆಲಸದ ಪ್ರತಿ 20 ದಿನಗಳಿಗೆ ಸಂಬಳ ಸಹಿತ ಒಂದು ದಿನ ರಜೆ ದೊರೆಯುವುದು. ಸ್ವಾತಂತ್ರ್ಯ ದಿನಾಚರಣೆ, ಗಣರಾಜ್ಯ ದಿನಾಚರಣೆ ಹಾಗೂ ಮೇ ದಿನಾಚರಣೆ ಈ ಮೂರು ಮಾತ್ರ ಅವರಿಗೆ ರಜಾ ದಿನಗಳಾಗಿರುತ್ತವೆ. ಅವರ ಧಾರ್ಮಿಕ ರೀತಿ ನೀತಿಗಳಿಗನುಸರಿಸಿ ಎರಡು ರಜಾ ದಿನಗಳೂ ಕೊಡಲ್ಪಡುವವು. ಈ ಯೋಜನೆಯಿಂದ 6,000 ಕೂಲಿಯವರಿಗೆ ಪ್ರಯೋಜನ–ಹಿತಗಳು ದೊರೆಯಲಿವೆ.

ಲಘು ಸಂಗೀತದಲ್ಲಿ ಪ್ರಥಮ ಬಹುಮಾನ

ತುಮಕೂರು ಯುವಕ ಸಂಘದ ಸದಸ್ಯರಾದ ಟಿ. ವಿ. ರಾಜುರವರು, ತಿಪಟೂರಿನ ಯುವಕ ಸಂಘದ ಆಶ್ರಯದಲ್ಲಿ ನಡೆದ ಅಖಿಲ ಕರ್ನಾಟಕ ನಾಟಕ, ನೃತ್ಯ ಮತ್ತು ಸಂಗೀತ ಸ್ಪರ್ಧೆಯಲ್ಲಿ ತುಮಕೂರಿನ ಯುವಕ ಸಂಘದಿಂದ ಭಾಗವಹಿಸಿ ಲಘು ಸಂಗೀತದ ಮೊದಲನೆಯ ಬಹುಮಾನವಾಗಿ ರಜತ ಕರಂಡಕವನ್ನು ಗಳಿಸಿದ್ದಾರೆ. ತುಮಕೂರಿನ ಯುವಕ ಸಂಘಕ್ಕೆ ಇದೊಂದು ಹೆಮ್ಮೆಯ ಸಂಗತಿಯಾಗಿದೆ.

ನೀವೇನು ಹೇಳುತ್ತೀರಿ ?

ಭಾರತ ಸೇವಕ ಸಮಾಜ— ೮ ಲಕ್ಷ ರೂ. ಸೇವೆ

ಭಾರತದ ಶಿಕ್ಷಣ ಸಚಿವ ಶಾಖೆಯು ಪ್ರತಿ ವರುಷವೂ ಯುವಕರ ಶಿಬಿರಗಳನ್ನು ನಡೆಸಲು ಭಾರತ ಸೇವಕ ಸಮಾಜಕ್ಕೆ ೧೨ ಲಕ್ಷ ರೂಪಾಯಿಗಳನ್ನು ಕೊಡುತ್ತದೆ. ಇದರಲ್ಲಿ ಒಂದು ದಿನಕ್ಕೆ ಒಂದು ಶಿಬಿರಕ್ಕೆ ಒಂದೂವರೆ ರೂಪಾಯಿಯಂತೆ ಹಂಚಲ್ಪಡುತ್ತದೆ. ಇದರಲ್ಲಿ ಎರಡಾಣೆಗಳು ಭಾರತ ಸೇವಕ ಸಮಾಜದ ಕೇಂದ್ರ ಮತ್ತು ಪ್ರದೇಶ ಆಫೀಸುಗಳಿಗೆ ಹೋಗುತ್ತವೆ.

1954ರಿಂದ 1958ರ ವರೆಗೆ ಭಾರತ ಸೇವಕ ಸಮಾಜವು ಒಟ್ಟು ೬೦ ಲಕ್ಷ ರೂಪಾಯಿಗಳನ್ನು ಪಡೆದಿದೆ. ಆದರೆ ಪ್ರತಿ ವರುಷವೂ ಪಡೆದ ಈ ಹಣವನ್ನು ವ್ಯಯಿಸಲು ಅದು ಸಮರ್ಥವಾಗಿಲ್ಲ. ಹೀಗೆ ಖರ್ಚಾಗದೆ ಉಳಿದಿರುವ ಒಟ್ಟು ಹಣ ೮ ಲಕ್ಷ ರೂ. ಇದೆ. ಹೀಗೆ ಹೆಚ್ಚಾಗಿ ಉಳಿದಿರುವ ಹಣವನ್ನು ವಾಪಸ್ ಕೊಡಬೇಕೆಂದು ಶಿಕ್ಷಣ ಸಚಿವ ಶಾಖೆಯು ಒಂದೇ ಸಮನೆ ಕೇಳುತ್ತಿದೆ. ಆದರೆ ಸಮಾಜವು ಪ್ರತಿ ಸಲವೂ ಯಶಸ್ವಿಯಾಗಿ ನುಣುಚಿಕೊಳ್ಳುತ್ತಿದೆ, ತಪ್ಪಿಸಿಕೊಳ್ಳುತ್ತಿದೆ.

'ಆ ಹಣ ಏನಾಯಿತು ?' ಎಂದು ನೀವು ಕೇಳಬೇಡಿ. ಇದಕ್ಕೆ ನೀವೇನು ಹೇಳುತ್ತೀರಿ?

ಕಾಂಗ್ರೆಸ್ ಪ್ರಜಾಪ್ರಭುತ್ವ

ಪ್ರಪಂಚಕ್ಕೆ ಮಾದರಿಯಾದ ಪ್ರಜಾಪ್ರಭುತ್ವ ನಮ್ಮಲ್ಲಿದೆಯೆಂದು ಹೇಳಲಾಗುತ್ತದೆ. ಹಾಗಿದ್ದರೆ ಸಂತೋಷವೆ. ಆದರೆ ಕಾಂಗ್ರೆಸ್ ಪ್ರಜಾಪ್ರಭುತ್ವದಲ್ಲೇ ಇನ್ನೂ ಒಂದು ಪ್ರಜಾಪ್ರಭುತ್ವ ಅರಳುತ್ತಿದೆ. ಅದು ಕೇರಳದ ಪ್ರಜಾಪ್ರಭುತ್ವ. ಅದಕ್ಕೂ ಇದಕ್ಕೂ ವ್ಯತ್ಯಾಸವಿಲ್ಲವೇ ? ಇದೆ, ನೋಡಿ :

ಜೂನ್ ತಿಂಗಳ ಕೊನೆಯ ಭಾಗದಲ್ಲಿ ಕೇರಳದ ಮುಖ್ಯ ಮಂತ್ರಿ ಶ್ರೀ ನಂಬೂದ್ರಿಪಾದ್‌ರವರು ಮದರಾಸಿನಲ್ಲಿದ್ದರು. ಆಗ ಅವರಿಗೆ ತುಂಬಾ ಕಾರ್ಯಕ್ರಮಗಳು. ಸ್ಟಾಕ್‌ಹೋಂ ಅಧಿವೇಶನಕ್ಕೆ ಬೆಂಬಲ ನೀಡುವ ಸಮ್ಮೇಲನವನ್ನು ಅವರೇ ಉದ್ಘಾಟಿಸಿದರು. ಶ್ರೀ ರಾಜಾಜಿಯವರು ಕಮ್ಯೂನಿಸ್ಟ್ ಶ್ರೀ ನಂಬೂದಿರಿಪಾದರೊಂದಿಗೆ ಮಾತನಾಡಿದುದೂ ಇಲ್ಲಿಯೆ. ಅದೇ ಇಂದು ತುಂಬಾ ಚರ್ಚೆಯ ವಿಷಯ ವಿಷಯವಾಗಿದೆ, ಇರಲಿ.

ಮದರಾಸಿನ ಬೀಚ್‌ನಲ್ಲಿ ಸಾರ್ವಜನಿಕ ಸಭೆಯೊಂದು ವ್ಯವಸ್ಥೆ ಮಾಡಲ್ಪಟ್ಟು ಶ್ರೀ ನಂಬೂದಿರಿಪಾದರು ಭಾಷಣಕಾರರಾಗಿ ಆಗಮಿಸಿದರು.

ಆದರೆ ಸೋಜಿಗದ ಸಂಗತಿಯೊಂದು ನಡೆದುಹೋಯಿತು. ಮದರಾಸು ಸರಕಾರವು ಆಜ್ಞೆಯೊಂದರ ಮೂಲಕ ಶ್ರೀ ನಂಬೂದಿರಿಪಾದ್‌ರವರು ಸಭೆಯಲ್ಲಿ ಮದರಾಸಿನ ಗೋಳಿಬಾರ್ [ಬಂದರು ಕೆಲಸಗಾರರ ಮುಷ್ಕರದ ಕಾಲಕ್ಕೆ ಗೋಳಿಬಾರ್ ಆಗ ಆದುದು.] ವಿಷಯಕ್ಕೆ ಚಕಾರ ಶಬ್ದ ಎತ್ತಬಾರದೆಂದೂ ಯಾವದೇ ಬಗೆಯಲ್ಲೂ ಆ ವಿಷಯ ಮಾತನಾಡಬಾರದೆಂದೂ ತಿಳುಹಿಸಲಾಯಿತು, ಸಭೆಯ ಈ ಕಾಲಕ್ಕೆ.

ಆದರೆ ಇಲ್ಲಿರುವ ವಿಷಯವೆಂದರೆ ಕೇರಳದ ಸಚಿವರ ಕಾರ್ಯಕ್ರಮವೆಲ್ಲ ಮುಂಚಿತವಾಗಿಯೆ ನಿಶ್ಚಯಿಸಲ್ಪಟ್ಟಿತ್ತು. ಆಗಿನ್ನೂ ಮುಷ್ಕರವೂ ನಡೆದಿರಲಿಲ್ಲ, ಮದರಾಸಿನ ಬೀದಿಗಳಲ್ಲಿ ಕಾರ್ಮಿಕರ ಕೊಲೆಯೂ ನಡೆದಿರಲಿಲ್ಲ.

ಈ ಸಭೆಯ ಉದ್ದೇಶ ಕೇವಲ ನಂಬೂದಿರಿಪಾದರನ್ನು ಸ್ವಾಗತಿಸುವುದು ಮಾತ್ರವೇ ಆಗಿತ್ತು, ಇನ್ನೇನೂ ಇರಲಿಲ್ಲ !

ನೆರೆಪ್ರಾಂತದ ಯಾವದೋ ಒಂದು ಪಕ್ಷದ —ವಿರೋಧ ಪಕ್ಷವೆಂದೇ ಹೇಳಿ ಬೇಕಾದರೆ— ನಾಯಕರಾರಾದರೂ ಅವರಾಗಿದ್ದರೆ ಆ ಮಾತೇ ಬೇರೆಯಾಗಿತ್ತು. ನೆರೆಪ್ರಾಂತ್ಯದ ಮುಖ್ಯ ಮಂತ್ರಿಗಳೊಬ್ಬರಿಗೆ ಕೊನೇ ಗಳಿಗೆಯಲ್ಲಿ ಇಂಥ ಆಕ್ಷೇಪಕಾರಕ ಆಜ್ಞೆಯನ್ನು ಹೊರಡಿಸಿದವರಾದರೂ ಯಾರು ?

ದೇವೀಕುಲಂ ಉಪಚುನಾವಣೆಯ ಕಾಲಕ್ಕೆ ಅಲ್ಲಿಗೆ ತೆರಳಿದ್ದ ಮದರಾಸಿನ ಸಚಿವ ಸಂಪುಟದ ಮುಖ್ಯಮಂತ್ರಿ ಮತ್ತು ಇನ್ನೊಬ್ಬರು, ಅಲ್ಲಿ ಹೋಗಿ ಕಮ್ಯೂನಿಸ್ಟರನ್ನೂ, ಕಮ್ಯೂನಿಸ್ಟ್ ಸರಕಾರವನ್ನು ಅವರ ನೀತಿ ಧೋರಣೆಗಳನ್ನು ಸಿಕ್ಕಾಬಟ್ಟೆ ಬೈದವರು ಮತ್ತು ಟೀಕಿಸಿದವರು. ಪ್ರಜಾಪ್ರಭುತ್ವಕ್ಕೆ ವಿರೋಧವಾದ ಸರ್ವಾಧಿಕಾರ ಕೇರಳದಲ್ಲಿದೆಯೆಂದು ಕಿರುಚಿದವರು !

ಇದೀಗ ಹೇಳಿ ಯಾವುದು ಪ್ರಜಾಪ್ರಭುತ್ವ ?

ಯಾರ ಅಭಿವೃದ್ಧಿ ?

ಅಭಿವೃದ್ಧಿ ಯೋಜನೆಗಳಿಗೆ ಧಾರಾಳವಾಗಿ ಹಣ ಖರ್ಚು ಮಾಡಲಾಗುತ್ತಿದೆ. "ಆಧುನಿಕ ದೇವಾಲಯಗಳು" ಎಂದು ಯೋಜನೆಗಳನ್ನು ಕರೆದು ಜನರನ್ನು ಹುರಿಗೊಳಿಸಲಾಗುತ್ತಿದೆ. ಹಣವನ್ನೂ ನೀರಿನಂತೆ ವ್ಯಯಿಸಲಾಗುತ್ತಿದೆ.

ಇವುಗಳಿಗೆ ವ್ಯಯವಾಗುವ ಹಣ ಎಲ್ಲವೂ ನೀರಿನಂತೆ ಹರಿದುಹೋಗಲಿಕ್ಕಿಲ್ಲವಾದರೂ ಹಾಗೆ ನೀರಾಗುವ, ಪೋಲಾಗುವ ಹಣವನ್ನು ಕಂಡರೆ ನಿಮಗೇನೆನಿಸೀತು ? ಒಂದೇ ಒಂದು ದೃಷ್ಟಾಂತವನ್ನಿಲ್ಲಿ ಕೊಡಲಾಗಿದೆ :

ಉತ್ತರ ಪ್ರದೇಶದಲ್ಲಿ ರೀಹಾಂಡ್ ಅಣೆಕಟ್ಟಿನ ಯೋಜನೆಗೆ ಮೊದಲು ಅಂದಾಜು ಮಾಡಿದ ಹಣ ರೂ, 35 ಕೋಟಿಗಳು. ಇದೀಗ ಅದರ ವೆಚ್ಚ 46 ಕೋಟಿ ರೂಪಾಯಿಗಳಿಗೇರಿದೆ.

ಈ ಯೋಜನೆಯಿಂದ ನಿರೀಕ್ಷಿತ ಉತ್ಪನ್ನ ಏನೂ ಇಲ್ಲೇ ಎಂದು ಹೇಳಬೇಕು. ಇದರಲ್ಲಿ ತೊಡಗಿಸಿದ ಹಣದ ಬಡ್ಡಿ ಮತ್ತಿನ್ನಿತರ ವಿಷಯಗಳಲ್ಲಿ ಈ ಉತ್ಪನ್ನವೆಲ್ಲ ತೊಳೆದುಹೋಗುತ್ತದೆ.

ಇಲ್ಲಿ ಇನ್ನೂ ಒಂದು ಮೋಜು ಇದೆ:

ಅಣೆಕಟ್ಟು ಕಟ್ಟುವ ಸಂಪೂರ್ಣ ಕೆಲಸವನ್ನೆಲ್ಲ "ಅತ್ಯಂತ ವಿಶ್ವಾಸಿಕ ಗುತ್ತಿಗೆದಾರ"ರೊಬ್ಬರಿಗೆ ವಹಿಸಿಕೊಡಲಾಗಿದೆ. ಆದರೆ ನಿರಾವರಿ ಶಾಖೆಯು ಮೇಲ್ವಿಚಾರಣೆಗೆ ತನ್ನ ಸಿಬ್ಬಂದಿಯನ್ನೂ ಇಟ್ಟಿದೆ.

ಆ ಸಿಬ್ಬಂದಿಯ ವಿವರ ಹೀಗಿದೆ:

ಒಬ್ಬ ಚೀಫ್ ಇಂಜಿನಿಯರ್, ಒಬ್ಬ ಸುಪರಿಂಟೆಂಡಿಂಗ್ ಎಂಜಿನೀಯರ್, ನಾಲ್ವರು ಎಕ್ಸಿಕ್ಯೂಟಿವ್ ಎಂಜಿನೀಯರುಗಳು, 16 ಜನ ಸಹಾಯಕ ಎಂಜಿನೀಯರುಗಳು, ಆಮೇಲೆ ಓವರ್‌ಸೀಯರುಗಳು ಮತ್ತು ವರ್ಕ್ ಏಜಂಟರುಗಳ ಭಾರೀ ಪಡೆ.

ಗುತ್ತಿಗೆದಾರರಿಗೆ 17 ಕೋಟಿ ರೂಪಾಯಿಗಳನ್ನು ಕೊಡಲಾಗುವುದು, ಉಳಿದ ರೂಪಾಯಿಗಳನ್ನು ಈ ಸಿಬ್ಬಂದಿಯವರಿಗೆ ಖರ್ಚು ಮಾಡಲಾಗುವುದು.

ಈಗ ನೀವು ನೀರಾವರಿ ಶಾಖೆಯೇ ಯಾಕೆ ಇದನ್ನು ವಹಿಸಿಕೊಳ್ಳಬಾರದು? ಎಂದು ಕೇಳಬೇಡಿ, ಇದಕ್ಕೆ ನೀವೇನು ಹೇಳುತ್ತೀರಿ ?

ಬಾಗಲಕೋಟೆ—

ಸಿಮೆಂಟ್ ಕಾರ್ಮಿಕನ ಅನ್ನ ಸತ್ಯಾಗ್ರಹ

ದುರಾಡಳಿತಕ್ಕೆ ಬೇಸತ್ತ ಕಾರ್ಮಿಕರ ಪ್ರತಿಭಟನೆ

ತಾ. 30 6—58ನೇ ದಿವಸ ಮುಂಜಾನೆ 8 ಘಂಟೆಗೆ ಬಾಗಲಕೋಟೆ ಸಿಮೆಂಟ್ ಕಾರ್ಖಾನೆಯ ಕ್ರಶರ್ ಮೆಷಿನ್ ಡ್ರೈವರ್ ಮಹಮ್ಮದ್ ಗೌಸ್ ಎಂಬವರು ತಮ್ಮನ್ನು ಅನ್ಯಾಯವಾಗಿ ನೌಕರಿಯಿಂದ ತೆಗೆದು ಹಾಕಿರುವರೆಂದು ಉಪವಾಸ ಪ್ರಾರಂಭಿಸಿದ್ದಾರೆ. ಇವರಿಗೆ ಸಿಮೆಂಟ್ ಕಾರ್ಖಾನೆಯ ಕೆಲಸಗಾರರ ಸಂಘದವರೂ ಮತ್ತು ಸಾರ್ವಜನಿಕರೂ ಗೌಸರು ಉಪವಾಸ ಕೂತಲ್ಲಿಗೆ ಹೋಗಿ ಅವರಿಗೆ ಭೆಟ್ಟಿಯಾಗಿ ಸಹಾನುಭೂತಿ ತೋರಿಸುತ್ತಿರುವರು.

ಮಹಮ್ಮದ್ ಗೌಸ್ ಉಪವಾಸ ಕೂತರೆ, ಆತ್ಮಹತ್ಯೆ ಮಾಡಿಕೊಳ್ಳಲಿಕ್ಕೆ ಪ್ರಯತ್ನ ಮಾಡಿರುವರೆಂದು ಆರೋಪ ಹೊರಿಸಿ, ಅವರನ್ನು ಹಿಡಿದು ಜೈಲಿಗೆ ಹಾಕಲಾಗುವುದೆಂದು ಪೋಲೀಸರೂ. ಕಂಪೆನಿಯವರೂ ಅಪಪ್ರಚಾರಮಾಡಿ, ಕೆಲಸಗಾರರಲ್ಲಿ ಅಂಜಿಕೆ ಹುಟ್ಟಿಸಲಿಕ್ಕೆ ಪ್ರಯತ್ನಿಸಿದರು. ಗೌಸರಿಗೆ ಯಾರೇ ಕೆಲಸಗಾರರು ಬೆಂಬಲ ಕೊಟ್ಟರೆ ಅಂಥವರನ್ನು ಕೂಡಲೇ ನೌಕರಿಯಿಂದ ತೆಗೆದು ಹಾಕಲಾಗುವುದೆಂದು ಕಾರ್ಖಾನೆಯೊಳಗೆ ನೋಟೀಸು ಹಚ್ಚಿರುವರು. ಆದರೆ ಕಂಪೆನಿಯ ದುರಾಡಳಿತಕ್ಕೆ ಬೇಸತ್ತ ಎಲ್ಲಾ ಕೆಲಸಗಾರರು ಗೌಸರಿಗೆ ಸಂಪೂರ್ಣ ಬೆಂಬಲ ಕೊಡುತ್ತಿರುವರು.

29—6—58ನೇ ದಿವಸ ಕಮ್ಯೂನಿಸ್ಟ್ ಪಾರ್ಟಿ ಮತ್ತು ಸಿಮೆಂಟ್ ಕಾರ್ಖಾನೆ ಕೆಲಸಗಾರ ಸಂಘದ ಪರವಾಗಿ, ಸಾರ್ವಜನಿಕ ಸಭೆ ಕೂಡಿ, ಗೌಸರ ಅನ್ನ ಸತ್ಯಾಗ್ರಹಕ್ಕೆ ಸಂಪೂರ್ಣ ಬೆಂಬಲ ಕೊಡಲಾಯಿತು. ಕೂಲಿಗಾರ ಸಂಘದ ಅಧ್ಯಕ್ಷರಾದ ಎನ್. ಕೆ. ಉಪಾಧ್ಯಾಯರು ಭಾಷಣ ಮಾಡುತ್ತ, ಸರಕಾರದ ಕೂಲಿಕಾರ ನೀತಿಯನ್ನು ಖಂಡಿಸಿ, ಲೇಬರ್ ಅಧಿಕಾರಿಗಳೆಲ್ಲ ಕೆಲಸಗಾರರ ತಕ್ರಾರುಗಳನ್ನು ಯೋಗ್ಯ ರೀತಿಯಲ್ಲಿ ವಿಚಾರಣೆ ಮಾಡದೆ, ಮಾಲಕರ ಪರವಾಗಿ ನಿರ್ಣಯ ಕೊಡುತ್ತಿರುವುದನ್ನು ಖಂಡಿಸಿದರು. ಸರಕಾರದವರು ತಾವೇ ಪಾಸು ಮಾಡಿಕೊಂಡ ಕೂಲಿಗಾರ ಕಾನೂನಿಗನುಸಾರವಾಗಿ, ಮಾಲಕರು ನಡೆಯದಿದ್ದಾಗ, ಅಂಥವರ ಮೇಲೆ ಯಾವುದೇ ಕ್ರಮತೆಗೆದುಕೊಳ್ಳದೆ, ಕೆಲಸಗಾರರ ಹೋರಾಟಗಳನ್ನು ಹತ್ತಿಕ್ಕುತ್ತಿರುವ ಸರಕಾರದ ನೀತಿ ಖಂಡನೀಯವೆಂದರು. ಮಾಲಿಕರ ಮತ್ತು ಪೋಲೀಸರ ದಬ್ಬಾಳಿಕೆಗೆ ಅಂಜದೆ ಸಂಘಟಿತರಾಗಿ, ಗೌಸರಿಗೆ ಬೆಂಬಲ ಕೊಡಬೇಕೆಂದು ಕೇಳಿಕೊಂಡರು. ಮೊದಲಿಗೆ ಮಹಮದ್ ಗೌಸರು ಅನ್ನಸತ್ಯಾಗ್ರಹ ಯಾಕೆ ಕೈಗೊಳ್ಳುತ್ತೇನೆಂಬುದನ್ನು ತಿಳಿಸಿ ಎಲ್ಲರ ಸಹಾನುಭೂತಿ ಕೋರಿದರು.

ಸಿಮೆಂಟ್ ಕೆಲಸಗಾರ ಸಂಘದ ಕಾರ್ಯದರ್ಶಿ ಬಿ. ಆರ್. ಮಾಗಿಯವರೂ, ಡಿ. ಎಂ. ಖಲಾಸಿಯವರೂ ಮಾತಾಡಿ, ಕಂಪೆನಿಯವರು ಮಹಮ್ಮದ್ ಗೌಸರನ್ನು ಬದನಾಮ್ ಮಾಡುವುದರ ಸಲುವಾಗಿ, ಒಂದು ಬೋಗಸ್ ಕೆಲಸಗಾರ ಸಂಘದ ಅಧ್ಯಕ್ಷರ ಹೆಸರಲ್ಲಿ ಗೌಸರ ವಿರುದ್ಧ ಅಪಪ್ರಚಾರ ಮಾಡಿರುವುದನ್ನು ಖಂಡಿಸಿ, ಇಂಥ ಕುತಂತ್ರಗಳಿಗೆ ಯಾರೂ ಬಲಿಯಾಗುವುದಿಲ್ಲ ಎಂದು ಹೇಳಿ, ಸಾರ್ವಜನಿಕರ ಬೆಂಬಲ ಕೋರಿದರು. ಸರಕಾರಕ್ಕೆ ಮತ್ತು ಕಂಪೆನಿಯವರಿಗೆ ಅರ್ಪಿಸುವುದರ ಸಲುವಾಗಿ ಸಾರ್ವಜನಿಕರ ಒಂದು ಮನವಿಯ ಮೇಲೆ ಸಾವಿರಾರು ಸಹಿ ಸಂಗ್ರಹ ಮಾಡುತ್ತಿರುವರು.

[ಪತ್ರಿಕೆ ಮುದ್ರಣಕ್ಕೆ ಹೋಗುವ ಕಾಲಕ್ಕೆ ಉಪವಾಸ ಮುಷ್ಕರವು ಮುಕ್ತಾಯವಾಗಿರುವದಾಗಿ ನಮಗೆ ಸುದ್ದಿ ಬಂದಿದೆ. ವಿಶೇಷ ವರದಿ ಮುಂದಿನ ವಾರಕ್ಕೆ.—ಸಂ.]

ಸುದ್ದಿ ಸಂಗ್ರಹ

ದಾವಣಗೆರೆ ಮುನಿಸಿಪಾಲಿಟಿಗೆ

ಕಮ್ಯೂನಿಸ್ಟ್ ಉಪಾಧ್ಯಕ್ಷರ ಆಯ್ಕೆ

ದಾವಣಗೆರೆಯ ನಗರ ಸಭೆಯ ಉಪಾಧ್ಯಕ್ಷ ಸ್ಥಾನಕ್ಕೆ ಕಮ್ಯೂನಿಸ್ಟ್ ಪಾರ್ಟಿಯ ಸದಸ್ಯರಾದ ಕಾಮ್ರೇಡ್ ಮಲ್ಲಪ್ಪನವರು 29ನೇ ವಾರ್ಡ್ ಕೌನ್ಸಿಲ್ಲು ತಾ. 23—6—58ನೇ ಸೋಮವಾರ ದಾವಣಗೆರೆಯ ನಗರದ ಸಿಟಿ ಮುನಿಸಿಪಾಲಿಟಿಗೆ ಉಪಾಧ್ಯಕ್ಷರಾಗಿ ಸರ್ವಾನುಮತದಿಂದ ಆರಿಸಿ ಬಂದಿರುತ್ತಾರೆ.

ಹರಿಹರ—

ಕಾರ್ಮಿಕ ವಿವಾದಗಳ ಇತ್ಯರ್ಥದಲ್ಲಿಯ ವಿಲಂಬನೆಯ ಖಂಡನೆ

ತಾ. 20—6—58ರಂದು ಮೈಸೂರ ಕಿರ್ಲೋಸ್ಕರ ಕೆಲಸಗಾರರ ಸಂಘದ ಬಹಿರಂಗ ಸಭೆಯು ಸಂಘದ ಅಧ್ಯಕ್ಷರಾದ ಶ್ರೀ ಎಮ್. ಸಿ. ನರಸಿಂಹೆ, ಎಂ. ಎಲ್. ಎ. ಇವರ ಅಧ್ಯಕ್ಷತೆಯಲ್ಲಿ ಸೇರಿತ್ತು. ಸಭೆಯು ಪ್ರಾರಂಭವಾಗುವುದಕ್ಕೆ ಮೊದಲು ನಮ್ಮ ದೇಶದ ಟ್ರೇಡ್ ಯೂನಿಯನ್ ಚಳುವಳಿಯಲ್ಲಿ ಅತ್ಯಂತ ಹಿರಿಯರು ಮತ್ತು ನಾಯಕರು ಆದ ಶ್ರೀ ವಿ. ಚಕ್ಕರೈ ಚೆಟ್ಟಿಯಾರ್‌ರವರ ನಿಧನಕ್ಕಾಗಿ ಸಂತಾಪ ಸೂಚಿಸಲು ಸಭೆಯು ಎರಡು ನಿಮಿಷ ಎದ್ದು ನಿಂತು ಮೌನ ಆಚರಿಸಿ ಮೃತರ ಆತ್ಮಕ್ಕೆ ಶಾಂತಿ ಕೋರಿತು.

ಅಧ್ಯಕ್ಷರು ಕಳೆದ ಒಂದೂವರೆ ವರ್ಷ ಸಂಸ್ಥಾನದ ಕೈಗಾರಿಕಾ ಕೋರ್ಟಿನಲ್ಲಿರುವ ಕಾರ್ಮಿಕರ ಬೇಡಿಕೆಗಳು ಇತ್ಯರ್ಥವಾಗದಿರುವುದಕ್ಕೆ, ಸರ್ಕಾರದವರು ಕಳೆದ ವರ್ಷ ಆರು ತಿಂಗಳುಗಳ ಕಾಲವನ್ನು ವ್ಯರ್ಥ ವ್ಯಯ ಮಾಡಿದ್ದನ್ನು, ನಂತರ ಕಂಪೆನಿಯ ಪ್ರತಿನಿಧಿಗಳು ತಂದೊಡ್ಡುತ್ತಿರುವ ರೀತಿನೀತಿಗಳನ್ನು ವಿವರಿಸಿ, ಮಾಲೀಕರ ನೀತಿಯನ್ನು ಖಂಡಿಸಿದರಲ್ಲದೆ ಕಾರ್ಮಿಕರಲ್ಲಿರಬೇಕಾದ ಐಕ್ಯಮತ್ಯವನ್ನು ಒತ್ತಿಹೇಳಿದರು ಮತ್ತು ಸಂಘದ ಕರೆಯ ಮೇರೆಗೆ ಸಂಘದ ಕಾರ್ಯಕ್ರಮಗಳನ್ನು ಯಶಸ್ವಿಗೊಳಿಸಿದ ಬಗ್ಗೆ ಕಾರ್ಮಿಕರನ್ನು ಅಭಿನಂದಿಸಿದರು.

ತಾ. 16—6—58ರಂದು ಮದ್ರಾಸ ಸರಕಾರದ ಪೋಲೀಸರು ಬಂದರು ಕಾರ್ಮಿಕರ ಮೇಲೆ ಕ್ರೂರ ಗೋಳಿಬಾರು ಮಾಡಿದ್ದನ್ನ ಖಂಡಿಸಲಾಯಿತು.

ತನ್ನ ಸೇವಕರಿಗೂ ಆಡಳಿತ ಪಕ್ಷದಿಂದ ಅನ್ಯಾಯ!

ಬೆಂಗಳೂರಿನ ಪೋಲೀಸರಿಗೆ ಸರಕಾರದಿಂದ ಹೇಗೆ ಅನ್ಯಾಯವಾಗುತ್ತಿದೆಂಬುದನ್ನು ತಿಳಿಸಲಿಚ್ಛಿಸುತ್ತೇನೆ. ಅವರಿಗೆ ಬರುವ ಸಂಬಳವೇ ತೀರಾ ಕಡಿಮೆ. ಇತರ ಪ್ರಾಂತಗಳಿಗೆ ಹೋಲಿಸಿದರೆ ನಮ್ಮ ಸರಕಾರ ಕೊಡುವ ಸಂಬಳ ಮತ್ತು ಭತ್ತೆ ಕಡಿಮೆ ಮಟ್ಟದ್ದಾಗಿರುತ್ತದೆ. ಇದರಿಂದ ಜೀವನ ನಡಿಸುವುದೇ ಕಷ್ಟವಾಗಿದೆ.

ಈಗ ಮೂರು ತಿಂಗಳಿಂದ ಅವರಿಗೆ ಕೊಡುವ ಭತ್ತೆಯಲ್ಲಿ 10ರೂ. ವಜಾ ಆಗಿದೆಯೆಂದು ವದಂತಿಯಿದೆ. ಇದರಿಂದ ನೂರಾರು ಬಡ ಸಂಸಾರಗಳಿಗೆ ಹೇಳಲಾರದ ತೊಂದರೆಯಾಗಿದೆ. ಸರಕಾರದ ಈ ಧೋರಣೆ "ಛಾಯದ ಮೇಲೆ ಬರೆ ಎಳೆದಂತೆ" ಆಗಿರುತ್ತದೆ. ಮೈಸೂರಿನ ಘನ ಸರಕಾರದವರು ಪೋಲೀಸ್ ಬಡಪಾಯಿಗಳಿಗೆ ಕೊಡುವ ಭತ್ಯವನ್ನು ಸರಿಯಾಗಿ ಕೊಟ್ಟು ನ್ಯಾಯ ದೊರಕಿಸುವರೆಂದು ನಂಬಿದ್ದೇನೆ.

"ನೊಂದವ"

ಯಲಹಂಕದಲ್ಲಿ ಪೋಲೀಸರ ವಿಚಿತ್ರ ವರ್ತನೆ !

ಯಲಹಂಕ ರೈಲ್ವೆಸ್ಟೇಷನಿನ ಅಸಿಸ್ಟೆಂಟ್ ಸ್ಟೇಷನ್ ಮಾಸ್ಟರ್ ಅವರ ಮನೆಯಲ್ಲಿ ಒಂದು ತಿಂಗಳ ಹಿಂದೆ ಕಳವಾಗಿದ್ದು ಅದನ್ನು ಸ್ಥಳೀಯ ಪೋಲಿಸ್ ಅಧಿಕಾರಿಗಳಿಗೆ ತಿಳಿಸಿದ್ದರೂ ಈ ತನಕ ಅವರು ಯಾವುದೇ ಕ್ರಮವನ್ನು ತೆಗೆದುಕೊಳ್ಳದಿರುವುದು ಶೋಚನೀಯವಾಗಿದೆ. ಈಗ ಅದೇ ಮನೆಯನ್ನು ಕಳ್ಳರು ಎರಡನೇ ಸಲ ಪ್ರವೇಶಿಸಿ ಕಳ್ಳತನ ಮಾಡಿದ ಪ್ರಕರಣವನ್ನು ಪೋಲಿಸರಿಗೆ ತಿಳಿಸಿದರೂ ಅಧಿಕಾರಿಗಳು ಯಾವ ಕ್ರಮವನ್ನೂ ತೆಗೆದುಕೊಳ್ಳದಿರುವುದು ಆಶ್ಚರ್ಯಕರವಾಗಿದೆ. ಈ ತರದ ಇನ್ನೂ ಅನೇಕ ಘಟನೆಗಳು ನಡೆದಿರುತ್ತವೆ. ಮೇಲಾಧಿಕಾರಿಗಳು ಕೂಡಲೇ ಇದರ ಬಗ್ಗೆ ತನಿಖೆ ನಡೆಸಿ ಸ್ಥಳೀಯ ಪೋಲಿಸರಿಗೆ ಎಚ್ಚರಿಕೆ ಕೊಟ್ಟರುವರು. ದಕ್ಷತೆಯಿಂದ ಜನರ ಸಂಕಷ್ಟಗಳ ಬಗ್ಗೆ ಗಮನ ಕೊಡುವಂತೆ ಮಾಡಬೇಕೆಂದು ವಿನಂತಿಸುತ್ತೇವೆ.

"ಯಲಹಂಕ ನಿವಾಸಿ"

ಸಂಪಾದಕರಿಗೆ ಪತ್ರಗಳು

ನಮಗೊಂದು ಸಂಘವೇಕೆ ಬೇಡ ?

ಬೆಂಗಳೂರಿನಲ್ಲಿ ಆಸ್ಪತ್ರೆಗಳಿಗೂ ದೊಡ್ಡ ದೊಡ್ಡ ಡಾಕ್ಟರುಗಳಿಗೂ ಕಡಮೆಯೇನಿಲ್ಲ. ಅಂತೆಯೇ ಅಸಂಖ್ಯಾತ ಕಾಂಪೌಂಡರ್‌ಗಳೂ ಇರುವರು. ಎಲ್ಲರ ವಿಷಯವಾಗಿಯೂ ಪೇಪರುಗಳಲ್ಲಿ ಏನಾದರೂ ಬರುತ್ತಿರುತ್ತದೆ. ಅವರ ಜೀವನ ಮಟ್ಟದ ಉತ್ತಮಿಕೆಗಾಗಿ ಚಟುವಟಿಕೆಗಳು ನಡೆದಿರುತ್ತವೆ. ಆದರೆ ಬಡ ಕಂಪೌಂಡರ್‌ಗಳ ವಿಷಯ ಯಾರೂ ಯೋಚಿಸುತ್ತಿಲ್ಲ. ಬೇರೆಯವರಿಗೆ ಈ ಆರೋಪಣೆಯನ್ನು ಮಾಡುವದಕ್ಕಿಂತ ಮೊದಲು ನಾವೇ ಯೋಚಿಸಬೇಕು. ಸಂಘಟನೆಗೆ ದಾರಿ ಮಾಡಬೇಕು. ಕಂಪೌಂಡರುಗಳು ಪಡೆಯುತ್ತಿರುವ ಸಂಬಳ ತೀರಾ ಅಲ್ಪವಾದುದು. ಹಲವೆಡೆಯಂತೂ ಸಂಬಂಧಿಸಿದ ಡಾಕ್ಟರುಗಳ ಮನೆಗೆಲಸವನ್ನು ಮಾಡುವ ಮನೆಯಾಳಿನ ಹುದ್ದೆ ಕಂಪೌಂಡರುಗಳಿಗಿದೆ. ಹೀಗೆ ಇನ್ನೂ ಏನೇನೋ ತೊಂದರೆಗಳಿವೆ. ಇವುಗಳನ್ನು ನಿವಾರಿಸಿಕೊಳ್ಳಲು ನಮಗೊಂದು ಸಂಘ ಬೇಕು. ಆಸಕ್ತರು ಮುಂದೆ ಬಂದು ಸಂಘಟನೆಗೆ ದೊರೆತರೆ ನನ್ನಂಥ ಕೈಲಾಗದ ಬಡ ಕಂಪೌಂಡರುಗಳು ಸಾಧ್ಯವಾದ ನೆರವು, ಸಹಕಾರಗಳನ್ನು ನೀಡಲು ಸಿದ್ಧರಾಗುತ್ತಾರೆ.

ಕಾರ್ಮಿಕ ಸಂಘಟನೆಗಳಲ್ಲಿ ತೊಡಗಿದ ಟ್ರೇಡ್ ಯೂನಿಯನಿಸ್ಟರೂ ಇದರಲ್ಲಿ ಈವರೆಗೂ ಆಸಕ್ತಿ ವಹಿಸದಿರುವುದೂ ನಮ್ಮ ದುರ್ದೈವವೇ ಸರಿ.

"ಓರ್ವ ಕಂಪೌಂಡರ್"
ಬೆಂಗಳೂರು

ಪುಕ್ಕಟೆ ವಾಚಕರು

ತಮ್ಮ ಪತ್ರಿಕೆಯಲ್ಲಿ ಇದೇ ಪುಟದಲ್ಲಿ ಪತ್ರಿಕಾ ಮಾರಾಟಗಾರರೊಬ್ಬರು ಬರೆದಿದ್ದ ದೂರನ್ನು ಓದಿದೆ. ಅದು ಸತ್ಯ. ಯಾಕೆಂದರೆ ನಾನೂ ಒಬ್ಬ ಪತ್ರಿಕಾ ಮಾರಾಟಗಾರನೇ.

ಸಿಟಿ ಮಾರ್ಕೆಟ್, ಸಿಟಿ ಬಸ್‌ಸ್ಟಾಂಡ್ ಇವು ಅತ್ಯಂತ ಜನದಟ್ಟಣೆಯ ಪ್ರದೇಶಗಳಾಗಿರುವದರಿಂದ ನಮಗೇನಾದರೂ ನಾಲ್ಕು ಪತ್ರಿಕೆಗಳು ಮಾರಾಟವಾಗಬೇಕಾಗಿದ್ದರೆ ಇದೇ ಸ್ಥಳಗಳಲ್ಲಿಯೇ ಎಂಬುದು ಸ್ಪಷ್ಟ. ಪೋಲೀಸರ ಹಾವಳಿಯಂತೂ ಎಂದಿನಿಂದ ಇದ್ದೇ ಇದೆ. ಬಸ್‌ಸ್ಟಾಂಡಿನಲ್ಲಿ ರೋಡ್ ಟ್ರಾನ್ಸ್‌ಪೋರ್ಟ್ ಇಲಾಖೆಯ ಹಲವು ಅಧಿಕಾರಿಗಳು ಕೂಡ ನಮ್ಮ ಬಳಿಯಲ್ಲಿರುವ ಪತ್ರಿಕೆಗಳನ್ನು ಪುಕ್ಕಟೆಯಾಗಿ ಓದಲು ಕೇಳುತ್ತಾರೆ. ಕೊಡದಿದ್ದರೆ ಇಲ್ಲದ ತಗಾದೆಗಳನ್ನಾರಂಭಿಸುತ್ತಾರೆ. ಅವರಿಗೆ ಪುಕ್ಕಟೆಯಾಗಿ ಪತ್ರಿಕೆಗಳನ್ನು ಓದಲು ಕೊಡಬೇಕೆಂಬ ಮನಸ್ಸು ನಮಗೂ ಇರುತ್ತೆ. ಆದರೆ ಅವು ಮಾರಾಟಕ್ಕೆ ಪುಕ್ಕಟೆಯಾಗಿ ದೊರೆತಿರದಿರುವುದೇ ನಮಗಿರುವ ತೊಂದರೆ, ಏನು ಮಾಡೋಣ ಸ್ವಾಮಿ ?

ಏನಾದರೂ ಮಾಡಿ ನಾಲ್ಕು ಕಾಸು ಸಂಪಾದಿಸಿ ಕಾಲ ಕಳೆಯೋಣ ಎಂಬ ನಮ್ಮಂತಹ ಚಿಲ್ಲರೆ ಮನುಷ್ಯರಿಗೂ ಹೀಗೆ ತೊಂದರೆಗಳು ಬಂದರೆ ಬದುಕೋದು ಹೇಗೆ ಸ್ವಾಮಿ ? ನಾವು ಯಾರಿಗೆ ಮೊರೆಯಿಡೋದು ?

"ಪತ್ರಿಕೆ ಮಾರಾಟಗಾರ"
ಬೆಂಗಳೂರು

ಮಂಗಳೂರು ಪತ್ರ

ಮುನಿಸಿಪಲ್ ಚುನಾವಣೆಗಳನ್ನು ಮುಂದೂಡಲು ಕಾಂಗ್ರೆಸ್ ಮುಖಂಡರ ಹಂಚಿಕೆ

ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ಮಂಗಳೂರು ಮತ್ತು ಉಡುಪಿ ಮುನಿಸಿಪಾಲಿಟಿಗಳಿಗೆ ಮದರಾಸು ಮುನಿಸಿಪಾಲಿಟಿ ಕಾನೂನು ಅನ್ವಯವಾಗುತ್ತದೆ. ಈ ಕಾನೂನಿನ್ವಯ ಪ್ರತಿ ಮೂರು ವರುಷಗಳಿಗೊಮ್ಮೆ ಚುನಾವಣೆ ನಡೆಯಬೇಕು.

ಚುನಾವಣೆ ನಡೆದು ಮುಂದಿನ ಅಕ್ಟೋಬರ್ ತಿಂಗಳಿಗೆ 3 ವರುಷಗಳು ಕಳೆಯುವುವು. ಮೈಸೂರು ಸರಕಾರವು ಮಂಗಳೂರು ಮುನಿಸಿಪಾಲಿಟಿಗೆ ಪತ್ರವೊಂದನ್ನು ಬರೆದು ಕಾನೂನು ಪ್ರಕಾರ ಮುಂದಿನ ಅಕ್ಟೋಬರ್ ತಿಂಗಳಿನಲ್ಲಿಯೇ ಕ್ರಮದಂತೆ ಚುನಾವಣೆ ನಡೆಯಬೇಕೆಂದು ಕೇಳಿಕೊಂಡಿದೆ.

ಮತದಾರರನ್ನಿದಿರಿಸಲು ಹೆದರಿಕೆ

ಆದರೆ ಮಂಗಳೂರು ನಗರಸಭೆಯಲ್ಲಿ ಆಳುವ ಪಕ್ಷವಾಗಿರುವ ಕಾಂಗ್ರೆಸ್ಸು ನ್ಯಾಯಬದ್ಧವಾಗಿ, ಪ್ರಜಾಪ್ರಭುತ್ವ ಕ್ರಮದಂತೆ ಮುಂದಿನ ಅಕ್ಟೋಬರ ತಿಂಗಳಿನಲ್ಲಿ ಚುನಾವಣೆ ನಡೆಸಲು ಸಿದ್ಧವಾಗಿಲ್ಲ. ತಾ. 27—6—58ರಂದು ಸೇರಿದ ನಗರಸಭೆಯ ಸಾಮಾನ್ಯ ಸಭೆಯಲ್ಲಿ "ಈ ವಿಷಯವನ್ನು ಸರಕಾರ ಇನ್ನೊಮ್ಮೆ ಪರಿಶೀಲಿಸಬೇಕು" ಎಂಬ ಠರಾವೊಂದನ್ನು ಕಾಂಗ್ರೆಸು ತನ್ನ ಬಹುಮತದಿಂದ ಸ್ವೀಕರಿಸಿತು.

ಯಾಕೆ ಇದು ?

ಕಾಂಗ್ರೆಸ್ಸಿನ ಈ ಮುಖಂಡರು ಈ ಠರಾವನ್ನು ಸ್ವೀಕರಿಸಲು ಕಾರಣವೇನು ?

ಕಳೆದ ಮೂರು ವರುಷಗಳಲ್ಲಿ ಮಂಗಳೂರು ನಗರಸಭೆಯ ಆಡಳಿತೆ ಶಿಥಿಲವಾಗಿದೆ, ಅವ್ಯವಸ್ಥೆಗೊಂಡಿದೆ. ದಿನನಿತ್ಯದ ಮುನಿಸಿಪಲ್ ಆಡಳಿತೆಯಲ್ಲಿ ಕಾಂಗ್ರೆಸ್ ಕೌನ್ಸಿಲರುಗಳು ಹಸ್ತಕ್ಷೇಪ ಮಾಡುತ್ತಾ ಆಡಳಿತೆಯನ್ನು ಹದಗೆಡಿಸುತ್ತಿದ್ದಾರೆ. ಯಾವ ಕೆಲಸವೂ ಸಮರ್ಪಕವಾಗಿ ನಡೆಯುತ್ತಿಲ್ಲ. ಕಾಲಹರಣ—ಪತ್ರಗಳಿಗೆ ಉತ್ತರ ಕೊಡದಿರುವಿಕೆಗಳು ಮುನಿಸಿಪಾಲಿಟಿಯ ದಿನದ ಕ್ರಮದಂತಾಗಿವೆ. ಅಭಿವೃದ್ಧಿ ಯೋಜನೆಗಳು ಸರಿಯಾಗಿ ನಡೆಯುತ್ತಿಲ್ಲ. ನಡೆದರೂ ದುರ್ವ್ಯಯವಾಗುತ್ತಿದೆ. ಪ್ರತಿಪಕ್ಷಗಳ ಕೌನ್ಸಿಲರುಗಳು ಆರಿಸಿ ಬಂದಿರುವ ವಾರ್ಡುಗಳ ಕಡೆಗೆ ಉದ್ದೇಶಪೂರ್ವಕವಾಗಿ ಅಲಕ್ಷ್ಯ ತೋರಲಾಗುತ್ತಿದೆ. ರಸ್ತೆಗಳಲ್ಲಂತೂ ನಡೆಯಲು ಕಷ್ಟವಾಗಿದೆ. ಮಳೆಗಾಲದ ಕೆಸರುನೀರು ತುಂಬಿ ವಾಹನಗಳ ಸಂಚಾರದಿಂದ ದಾರಿಹೋಕರಿಗೆ ಕಷ್ಟವಾಗುತ್ತಿದೆ. ರಾಜಕೀಯ ಪಕ್ಷಪಾತವೆಂಬುದು ನಗರಸಭೆಯ ಆಡಳಿತ ಪಕ್ಷದ ಪ್ರತಿನಿತ್ಯದ ಸೊಲ್ಲಾಗಿದೆ.

ಪರಿಣಾಮವಾಗಿ ನಗರಸಭೆಯ ಆಡಳಿತೆಯ ಕುರಿತು ನಾಗರಿಕರಿಗೆ ಅತೀ ಅತೃಪ್ತಿಯಾಗಿದೆ. ನಾಗರಿಕರ ಮಧ್ಯೆ ನಗರಸಭೆಯೆಂಬುದು ಹಾಸ್ಯದ ಹಾಡಾಗಿದೆ.

ಈ ಪರಿಸ್ಥಿತಿಯಲ್ಲಿ ಕಾಂಗ್ರೆಸ್ ಪಕ್ಷ ಮತದಾರರ ಮುಂದೆ ಹೋಗಿ ಮತ ಯಾಚಿಸಲು ಹೆದರುವುದು ಸ್ವಾಭಾವಿಕವೇ ಆಗಿದೆ. ಎಂತಲೇ ಆದಷ್ಟು ಸಮಯ ಮುಂದೆ ಹೋಗಲಿ ಎಂದವರು ಆಶಿಸುತಾತ್ತಾರೆ. ಆ ಉದ್ದೇಶದಿಂದ ಕ್ಷುಲ್ಲಕ ಕಾರಣಗಳನ್ನು ಕೊಟ್ಟು ಚುನಾವಣೆ ಮುಂದೆ ಹಾಕುವಂತೆ ಮಾಡಲು ಯತ್ನಿಸುತ್ತಾರೆ

ಇಷ್ಟೇ ಅಲ್ಲ....

ಈಗಿನ ನಗರಸಭಾಪತಿ ಶ್ರೀಮಾನ್ ಸೂರ್ಯನಾರಾಯಣ ಅಡಿಗರು ಕಳೆದ 6 ವರುಷಗಳಿಂದ ನಗರಸಭಾಪತಿಗಳಾಗಿಯೇ ಇದ್ದವರು. ಮೊದಲ ಮೂರು ವರುಷಗಳಲ್ಲಿ ಐಕ್ಯರಂಗದ ಬೆಂಬಲದಿಂದ ನಗರಸಭಾಪತಿಗಳಾಗಿದ್ದ ಶ್ರೀ ಅಡಿಗರು 1955ರಲ್ಲಿ ಕಾಂಗ್ರೆಸ್ ಸೇರಿ—ತನ್ಮೂಲಕ ಅವರ ಬೆಂಬಲದಿಂದ ನಗರಸಭಾಪತಿಗಳಾದರು. ನಗರಸಭೆಯ ಮುಂದಿನ ಅವಧಿಯಲ್ಲಿ ಅವರಿಗೆ ಈ ಸ್ಥಾನ ಸಿಗದೆಂದು ಕಾಂಗ್ರೆಸಿನವರೇ ಹೇಳುತ್ತಿದ್ದಾರೆ. ಹಾಗೆಯೇ ಇತರ ನಾಲ್ಕಾರು ಮಂದಿ ಕಾಂಗ್ರೆಸ್ ಕೌನ್ಸಿಲರುಗಳೂ ಮುಂದಿನ ಚುನಾವಣೆಯಲ್ಲಿ ಸ್ಪರ್ಧಿಸುವುದಿಲ್ಲವೆಂದು ತಿಳಿದುಬಂದಿದೆ.

ಹೀಗಿರುವಾಗ ಚುನಾವಣೆಯನ್ನು ಆದಷ್ಟು ಮುಂದೆ ತಳ್ಳಿದರೆ ತಮ್ಮ ಈಗಿನ ಪದವಿಗೇ ಆದಷ್ಟು ಹೆಚ್ಚು ಕಾಲ ಅಂಟಿಕುಳಿತುಕೊಳ್ಳಬಹುದಲ್ಲ ಎಂದು ಇವರ ಆಕಾಂಕ್ಷೆಯಾಗಿರಬೇಕು.

ಕ್ಷುಲ್ಲಕ ಕಾರಣಗಳು

ಚುನಾವಣೆಗಳನ್ನು ಮುಂದೂಡಲು ಕಾಂಗ್ರೆಸ್ ಸದಸ್ಯರು ಕೊಡುವಂತಹ ಕಾರಣಗಳಾದರೂ ಏನು? ಅಕ್ಟೋಬರ ತಿಂಗಳು ಮಳೆಗಾಲ—ಆದುದರಿಂದ ಚುನಾವಣೆ ಅಸಾಧ್ಯ.

ಕಳೆದ 1947ರಿಂದ ಮಂಗಳೂರು ಉಡುಪಿಗಳ ಮುನಿಸಿಪಲ್ ಚುನಾವಣೆ ನಡೆಯುತ್ತಿರುವುದು ಅಕ್ಟೋಬರ ತಿಂಗಳಿನಲ್ಲಿ. ಇಷ್ಟರ ತನಕ ಈ ವಾದವನ್ನು ಇವರು ಎತ್ತಿದ್ದ ಇಲ್ಲ ಮಾತ್ರವಲ್ಲ, ಅಕ್ಟೋಬರ ತಿಂಗಳು ಧಾರಾಕಾರವಾಗಿ ಮಳೆ ಸುರಿಯುವ ಸಮಯವಲ್ಲ. ಆಗೊಮ್ಮೆ—ಈಗೊಮ್ಮೆ ಮಳೆ ಬರುತ್ತದಷ್ಟೆ.

ಇವರು ಕೊಡುವ ಇನ್ನೊಂದು ಕಾರಣವೆಂದರೆ ವಾರ್ಡುಗಳ ಮತದಾರರ ಸಂಖ್ಯೆಯನ್ನು ಸರಿಯಾಗಿ ಹಂಚಿಲ್ಲ ಎಂಬುದು. ಈ ವಾದವು ಸರಿಯಾದ ವಾದವಲ್ಲ. ಯಾಕೆಂದರೆ ವರುಷ ಹೋದಂತೆ ವಾರ್ಡುಗಳಲ್ಲಿ ಮತದಾರರ ಸಂಖ್ಯೆ ಹೆಚ್ಚುತ್ತಿದೆ. ಈ ವರುಷ ಇವರ ವಾದದಂತೆ ಮತದಾರರ ಸಂಖ್ಯೆಯನ್ನು ಸರಿಯಾಗಿ ಹಂಚಿದರೆ—ಚುನಾವಣೆ ನಡೆಯುವಾಗ ಎಂದರೆ ಮುಂದಿನ ವರುಷ ಪುನಃ ಮತದಾರರ ಸಂಖ್ಯೆ ಹೆಚ್ಚುಕಡಿಮೆಯಾಗುವುದಿಲ್ಲವೇನು ?

ಕಮ್ಯೂನಿಸ್ಟ್ ಪಾರ್ಟಿಯ ವಿರೋಧ

ಈ ಮುನಿಸಿಪಲ್ ಚುನಾವಣೆಯನ್ನು ಮುಂದೂಡಲು ಕಾಂಗ್ರೆಸ್ ಪಕ್ಷದ ಮುಖಂಡರು ಯತ್ನಿಸುತ್ತಿರುವುದನ್ನು ಮೊದಲೇ ತಿಳಿದು ಕಮ್ಯೂನಿಸ್ಟ್ ಪಕ್ಷದ ದ.ಕ. ಜಿಲ್ಲಾ ಸಮಿತಿ "ಜಿಲ್ಲೆಯ ಕಾಂಗ್ರೆಸ್ಸಿನ ಕೆಲ ಕಾಂಗ್ರೆಸ್ಸಿಗರು ಅಲ್ಲಸಲ್ಲದ ನೆಪಗಳನ್ನು ಮುಂದೊಡ್ಡಿ ಚುನಾವಣೆಯನ್ನು ಮುಂದೆಹಾಕಲು ಮಾಡುತ್ತಿರುವ ಪ್ರಯತ್ನಗಳನ್ನು ಗಮನಿಸಿ ಈ ಹಂಚಿಕೆಯು ಪ್ರಜಾಪ್ರಭುತ್ವ ಕ್ರಮಕ್ಕೆ ಧಕ್ಕೆ ತರುವಂತಹದೆಂದು ಅಭಿಪ್ರಾಯಪಟ್ಟು ಕ್ಲಪ್ತ ಸಮಯದಲ್ಲಿಯೇ ಈ ಚುನಾವಣೆಗಳು ನಡೆಯುವಂತೆ ಸರಕಾರವನ್ನು ಒತ್ತಾಯಿಸಿದೆ. ಕಳೆದ ತಾ. 25, 26 ಈ ಎರಡು ದಿನಗಳಲ್ಲಿ ಸೇರಿದ್ದ ಕಮ್ಯೂನಿಸ್ಟ್ ಪಾರ್ಟಿಯ ಜಿಲ್ಲಾ ಸಮಿತಿಯ ಸಭೆ ಚುನಾವಣೆಗಳನ್ನು ಮುಂದೆಹಾಕಲು ಪ್ರಯತ್ನಿಸುವವರ ಹಂಚಿಕೆಗಳನ್ನು ವಿರೋಧಿಸಿ ಸರಕಾರವು ಯಾವ ಒತ್ತಾಯದಿಂದಲಾದರೂ ಚುನಾವಣೆಗಳನ್ನು ಮುಂದೆಹಾಕಬಾರದೆಂದು ಸರಕಾರವನ್ನು ಕೇಳಿಕೊಂಡಿದೆ.

ಪ್ರತಿಪಕ್ಷಗಳವರ ವಿರೋಧ

ನಗರ ಸಭೆಯು ತಾ. 27ರ ಸಭೆಯಲ್ಲಿ ಕಾಂಗ್ರೆಸ್ ಸದಸ್ಯರು ತಂದಿದ್ದ ಚುನಾವಣೆಯ ವಿಷಯವನ್ನು ಸರಕಾರ ಪುನರಾಲೋಚಿಸಬೇಕೆಂಬ ಠರಾವನ್ನು ಕಮ್ಯೂನಿಸ್ಟ್ ಕೌನ್ಸಿಲರುಗಳು ಇತರ ಪ್ರತಿಪಕ್ಷದ ಕೌನ್ಸಿಲರುಗಳೂ ಬಲವಾಗಿ ವಿರೋಧಿಸಿದರು. ಶ್ರೀ ಎ. ಶಾಂತರಾಮಪೈಯವರು ಮಾತನಾಡುತ್ತಾ 'ಈ ಚುನಾವಣೆಯನ್ನು ಮುಂದೆ ಹಾಕಿ ಜನರ ಕೈಯಲ್ಲಿರುವ ಪ್ರಜಾಪ್ರಭುತ್ವದ ಆಯುಧವನ್ನು ಕಸಿದುಕೊಳ್ಳುವುದು ಸರಿಯಲ್ಲ" ಎಂದು ವಾದಿಸಿದರು. ಆದರೆ ಕಾಂಗ್ರೆಸ್ ಬಹುಮತದಿಂದ ಕಾಂಗ್ರೆಸ್ ತಂದ ಈ ಠರಾವು ಅಂಗೀಕಾರವಾಯಿತು.

ಕಮ್ಯೂನಿಸ್ಟ್ ಪಾರ್ಟಿಯ ಜಿಲ್ಲಾ ಸಮಿತಿ ಸಭೆ

ಕಳೆದ ತಾ. 25, 26 ಈ ಎರಡು ದಿನಗಳಲ್ಲಿ ಸೇರಿದ ಕಮ್ಯೂನಿಸ್ಟ್ ಪಾರ್ಟಿಯ ಜಿಲ್ಲಾ ಸಮಿತಿಯ ಸಭೆಯು ಪಾರ್ಟಿಯ ಸಂಘಟನೆಯನ್ನು ಬೆಳೆಸಿ ವಿಸ್ತರಿಸುವ ಕುರಿತು, ಇನ್ನಿತರ ಚಟುವಟಿಕೆಗಳ ಕುರಿತೂ ಕೆಲವು ಮುಖ್ಯ ತೀರ್ಮಾನಗಳನ್ನು ಮಾಡಿದೆ. ಸಮಾರಂಭದಲ್ಲಿ ಜಿಲ್ಲಾ ಸಮಿತಿಯ ಕಾರ್ಯದರ್ಶಿ ಎ. ಕೃಷ್ಣಶೆಟ್ಟರು ಜಿಲ್ಲಾ ಸಮಿತಿಯ ಚಟುವಟಿಕೆಗಳನ್ನು ವಿವರಿಸಿದರು. ಈ ಸಭೆಯಲ್ಲಿ ಪ್ರಾಂತ ಸಮಿತಿಯ ಸದಸ್ಯ ಶ್ರೀ ಬಿ. ವಿ. ಕಕ್ಕಿಲ್ಲಾಯರೂ ಈ ಸಭೆಯಲ್ಲಿ ಉಪಸ್ಥಿತರಿದ್ದು ಪ್ರಾಂತ ಸಮಿತಿಯ ನಿರ್ಣಯಗಳನ್ನು ವಿವರಿಸಿದರು.

ಅಮೃತಸರ ಅಧಿವೇಶನದ ತೀರ್ಮಾನಗಳ ಆಧಾರದಲ್ಲಿ ಪಾರ್ಟಿ ಸಂಘಟನೆಯನ್ನು ಜಿಲ್ಲೆಯಲ್ಲಿ ಬಲಪಡಿಸುವ ಮತ್ತು ವಿಸ್ತರಿಸುವ ಕುರಿತು ಸಭೆ ಕೂಲಕಂಶವಾಗಿ ಚರ್ಚಿಸಿ ಹಲವು ನಿರ್ಣಯಗಳನ್ನು ಮಾಡಲಾಯಿತು. ಮತ್ತು ಜಿಲ್ಲೆಯಲ್ಲಿ ಕಮ್ಯೂನಿಸ್ಟ್ ಪಾರ್ಟಿಯ ಧ್ಯೇಯ ಧೋರಣೆಗಳ ಕುರಿತು ಪಾರ್ಟಿ ಕಾರ್ಯಕರ್ತರಿಗೆ ಶಾಲೆಯೊಂದನ್ನು ಅಗಸ್ಟು ಮೊದಲ ವಾರದಲ್ಲಿ ನಡೆಸಬೇಕೆಂದು ನಿರ್ಧರಿಸಲಾಯಿತು. ಮುಂದಿನ ನವೆಂಬರ ತಿಂಗಳಿನಲ್ಲಿ ಪಾರ್ಟಿಯ ಜಿಲ್ಲಾ ಸಮ್ಮೇಳನವನ್ನು ಜರಗಿಸಬೇಕೆಂದೂ, ಆ ಮೊದಲು ಪ್ರಾದೇಶಿಕ ಸಮ್ಮೇಲನಗಳನ್ನು ನಡೆಸಬೇಕೆಂದೂ ನಿರ್ಣಯವಾಯಿತು.

ಅಗ್ಗದರದ ಅಕ್ಕಿಯ ಅಂಗಡಿಗಳನ್ನು ತೆರೆಯಬೇಕು

ಜಿಲ್ಲೆಯಲ್ಲಿ ಅಕ್ಕಿಯ ಬೆಲೆ ದಿನೇ ದಿನೇ ಹೆಚ್ಚುತ್ತಿರುವುದನ್ನು ಜಿಲ್ಲಾ ಸಮಿತಿ ಗಮನಿಸಿ ಪರಿಣಾಮವಾಗಿ ಕಡಿಮೆ ಸಂಬಳದವರಿಗೂ, ರೈತರಿಗೂ ತುಂಬಾ ತೊಂದರೆಯಾಗುತ್ತಿದೆ. ಆದುದರಿಂದ ಜಿಲ್ಲೆಯಲ್ಲಿ ಅಗತ್ಯವಿರುವಲ್ಲೆಲ್ಲ ಅಗ್ಗದರದ ಅಕ್ಕಿಯಂಗಡಿಗಳನ್ನು ತೆರೆಯುವಂತೆ ಸರಕಾರವನ್ನು ಒತ್ತಾಯಿಸಲು ಮೈಸೂರಿನ ಮುಖ್ಯಮಂತ್ರಿಯವರಲ್ಲಿಗೆ ಶಿಷ್ಟ ಮಂಡಲಹೋಗಿ ಮನವಿಯೊಂದನ್ನು ಒಪ್ಪಿಸಬೇಕೆಂದು ನಿರ್ಣಯವಾಯಿತು.

ಪ್ರಾತಿನಿಧಿಕ ಮತ್ತು ಸಲಹಾ ಸಮಿತಿಗಳಲ್ಲಿ ಪಕ್ಷಪಾತ

ಜಿಲ್ಲಾ ಸಮಿತಿ ಅಂಗೀಕರಿಸಿದ ಇನ್ನೊಂದು ನಿರ್ಣಯದಲ್ಲಿ ಜಿಲ್ಲೆಯಲ್ಲಿರುವ ರಾಷ್ಟ್ರೀಯ ವಿಸ್ತರಣಾ ಯೋಜನೆ ಜಿಲ್ಲಾ ಅಭಿವೃದ್ಧಿ ಕೌನ್ಸಿಲ್ ಮೊದಲಾದ ಪ್ರಾತಿನಿಧಿಕ ಮತ್ತು ಸಲಹಾ ಸಮಿತಿಗಳಲ್ಲ ಕಮ್ಯೂನಿಸ್ಟ್ ಪಾರ್ಟಿಗೆ ಪ್ರಾತಿನಿಧ್ಯಕೊಡದೆ ಪಕ್ಷಪಾತತನ ತೋರಿಸುವುದನ್ನು ತೀವ್ರವಾಗಿ ಖಂಡಿಸಲಾಯಿತು. ಕಾಂಗ್ರೆಸ್ ಸರಕಾರವು ತನ್ನ ಪಕ್ಷದವರನ್ನೇ ಇಂತಹ ಸಮಿತಿಗಳಲ್ಲಿ ತುಂಬಿಸಿ ಅದನ್ನು ತಮ್ಮ ಪಕ್ಷದ ಸ್ವಾರ್ಥಕ್ಕಾಗಿ ಉಪಯೋಗಿಸಿ ಅವುಗಳನ್ನು ನಿಷ್ಕ್ರಿಯವನ್ನಾಗಿ ಮಾಡಿದೆಯೆಂದೂ ಜಿಲ್ಲಾ ಸಮಿತಿ ಅಭಿಪ್ರಾಯಪಟ್ಟು ಇಂತಹ ಸಮಿತಿಗಳಲ್ಲಿ ಕಮ್ಯೂನಿಸ್ಟ್ ಪಾರ್ಟಿಗೆ ಯೋಗ್ಯ ಪ್ರಾತಿನಿಧ್ಯಕೊಡಬೇಕೆಂದು ಸರಕಾರವನ್ನು ಒತ್ತಾಯಿಸಲಾಯಿತು.

ಸರಕಾರದ ಮಜೂರ ವಿರೋಧ ನೀತಿ

ಜಿಲ್ಲೆಯ ಮಜೂರರ ಹಲವು ಸಮಸ್ಯೆಗಳನ್ನು ಪರಿಹರಿಸಲು ಸರಕಾರ ಅಲಕ್ಷ್ಯ ತೋರಿಸುತ್ತಿರುವುದನ್ನು ಖಂಡಿಸಿ ಸರಕಾರ ಈಬಗ್ಗೆ ಕಾರ್ಯ ಪ್ರವೃತ್ತವಾಗುವಂತೆ ಸರಕಾರವನ್ನು ಒತ್ತಾಯಿಸಲು ಜಿಲ್ಲೆಯ ಮಜೂರವರ್ಗಕ್ಕೆ ಕರೆ ಕೊಡುವ, ಜಿಲ್ಲೆಯ ಸಾವಿರಾರು ಬೀಡಿ ಮಜೂರರಿಗೆ ಕನಿಷ್ಟ ವೇತನ ಮತ್ತು ಕಾನೂನಿನ ರಕ್ಷಣೆ ಕೊಡುವ ವಾಗ್ದಾನಮಾಡಿ ಸರಕಾರ ಈ ತನಕ ಯಾವ ಹೆಜ್ಜೆಯನ್ನು ಇಡದ್ದನ್ನು ಖಂಡಿಸಿ ಈ ಕೇಳಿಕೆಗಳನ್ನು ಪಡೆಯಲು ಬೀಡಿ ಮಜೂರರು ಹೂಡಲು ನಿರ್ಧರಿಸಿದ ಚಳವಳಿಗೆ ಸಂಪೂರ್ಣ ಬೆಂಬಲ ನೀಡುವ, ಮೈಸೂರು ಸರಕಾರವು ಭೂಸುಧಾರಣೆ ಮಾಡಲು ಕಾಲವಿಳಂಬ ಮಾಡುತ್ತಿರುವುದನ್ನು ಖಂಡಿಸಿ ಯಾರ ಹಂಗುದಾಕ್ಷಿಣ್ಯಗಳಿಗೂ ಒಳಗಾಗದೆ ಭೂಮಸೂದೆಯನ್ನು ಕೂಡಲೇ ತರುವಂತೆ ಜತ್ತಿ ಸರಕಾರವನ್ನು ಒತ್ತಾಯಿಸುವ ನಿರ್ಣಯಗಳನ್ನೂ ಈ ಸಭೆ ಸ್ವೀಕರಿಸಿದೆ.

ಜಿಲ್ಲೆಯಲ್ಲಿ ಪಾರ್ಟಿಯನ್ನು ಬಲಗೊಳಿಸಲಿಕ್ಕೂ, ವಿಸ್ತರಿಸಲಿಕ್ಕೂ ಜಿಲ್ಲೆಯ ಎಲ್ಲ ಪುರೋಗಾಮಿ ಜನತೆಯೂ ಸಹಾಯ ಸಹಕಾರ ನೀಡಬೇಕೆಂದು ಜಿಲ್ಲಾ ಸಮಿತಿ ವಿನಂತಿಸಿಕೊಂಡಿದೆ.

—"ಶ್ರೀನಿವಾಸ್"

ಸ್ವಲ್ಪದರಲ್ಲಿ ಸುದ್ದಿ

ಅಣುಬಾಂಬಿನ ಅಭಿವೃದ್ಧಿಗೆ ನೆರವಾಗಿದ್ದ ಅಮೇರಿಕೆಯ ಗಣಿತಜ್ಞ, 57ವರುಷದ ಡೋನಾಲ್ಡ್ ಎ. ಫ್ಲಾಂಡರ್ಸ್ ವಿಪರೀತ ಶಾಮಕ ದ್ರವಗಳನ್ನು ಕುಡಿದು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಅವರು ತಮ್ಮ ಹಿಂದೆ ಬಿಟ್ಟಿರುವ ಒಂದು ಚೀಟಿಯಲ್ಲಿ ಹೀಗೆ ಬರೆದಿದ್ದಾರೆ: "ನಾನು ಜೀವಂತವಾಗಿರುವುದಕ್ಕಿಂತ ಡಾಲರ್ ಮೌಲ್ಯದಲ್ಲಿ ಸತ್ತಿರುವುದೇ ಯೋಗ್ಯವಾಗಿದೆ. ಪ್ರಯೋಗ ಶಾಲೆಯಲ್ಲಿ ಪ್ರವೇಶಿಸಲಿಕ್ಕೆ ನನಗಿಷ್ಟವಿಲ್ಲ."

o o o o

ಚಿಯಾಂಗ್ ಕೈಷೇಕರ ಭ್ರಷ್ಟ ಆಡಳಿತದ ಪರಿಣಾಮವಾಗಿ ಜನ ದಟ್ಟದರಿದ್ರರಾಗಿ ತಮ್ಮ ರಕ್ತದ ಮಾರಾಟ ಮಾಡುವ ರಭಸದಲ್ಲಿ ನಾನು ಮುಂದು ತಾನು ಮುಂದು ಎಂದು ಟೈಚುಅಂಗ್‌ನಲ್ಲಿ ಇಬ್ಬರಿಗೆ ಭಾರೀ ಜಗಳವೇ ಆಯಿತು. ಅವರಲ್ಲೊಬ್ಬರು ತಮ್ಮ ಮನೆಯಲ್ಲಿ ಬಹಳ ದಿನಗಳಿಂದ ಆಹಾರವಿಲ್ಲವೆಂದು ಹೇಳಿದರೆ ಇನ್ನೊಬ್ಬನು ತನಗೆ ದುಡ್ಡು ಬೇಕಾಗಿತ್ತೆಂದು ಹೇಳಿದ್ದಾರೆ. ಈ ಜಗಳ ನಡೆದುದುದು ಲಿನ್‌ಮೆನ್ ಮತ್ತು ವಾಂಗ್‌ಷಿಂಗ್ ಚೂಯಾಂಗ್ ಎಂಬವರಿಬ್ಬರಲ್ಲಿ.

o o o o

ಮುಂದಿನ ವರುಷದ ಡಿಸೆಂಬರ್‌ನಿಂದ ಫೆಬ್ರವರಿ 1960ರವರೆ ಭಾರತದಲ್ಲಿ ಜಾಗತಿಕ ವ್ಯವಸಾಯದ ಉತ್ಸವ ನಡೆಯಲಿರುವುದಾಗಿ ಕೇಂದ್ರ ಸಹಕಾರ ಶಾಖೆಯ ಸಚಿವ ಶ್ರೀ ಪಂಜಾಬರಾವ್ ದೇಶಮುಖ ಹೇಳಿದ್ದಾರೆ. ಬೇರೆ ದೇಶಗಳಲ್ಲಿಯ ವ್ಯವಸಾಯಾಭಿವೃದ್ಧಿ, ಅಲ್ಲಿಯ ಸಾಧನ ಸಲಕರಣೆಗಳ ಪರಿಚಯನ್ನು ಭಾರತೀಯ ರೈತರಿಗೆ ಮಾಡಿಸಿಕೊಡುವುದಲ್ಲದೆ ಭಾರತದ ವ್ಯವಸಾಯಾಭಿವೃದ್ಧಿಯನ್ನು ಬೇರೆ ದೇಶಗಳವರಿಗೆ ಮಾಡಿಕೊಡುವುದು ಈ ಉತ್ಸವದ್ಯ ಉದ್ದೇಶ.

o o o o

'ಪ್ರಧಾನಿ ನೆಹ್ರೂ ಮತ್ತು ಚೀನಾದ ಪ್ರಧಾನಿ ಚೌ ಎನ್ ಲೈ ಅವರು ಪ್ರಪಂಚಕ್ಕೆ ಕೊಟ್ಟ 'ಪಂಚಶೀಲ'ದ ನಾಲ್ಕನೆಯ ವಾರ್ಷಿಕೋತ್ಸವವು ಜೂನ್ 28ರಂದು ಬೊಂಬಾಯಿಯಲ್ಲಿ ನಡೆಯಿತು. ಕಾಂಗ್ರೆಸ್ ನಾಯಕ ಎಸ್ .ಎ. ಕಾಡಾರ್‌ರವರು ಪಂಚಶೀಲದ ವಿಷಯವಾಗಿ ಮಾತನಾಡಿದರು. ಬರೆಹಗಾರ ಖ್ವಾಜಾ ಅಹ್ಮದ್ ಅಬ್ಬಾಸ್ ಮಾತನಾಡುತ್ತ, ಭಾರತ ಚೀನಗಳು ಶಾಶ್ವತ ಶಾಂತಿಗಾಗಿ ದಾರಿತೋರಿಸಿವೆ ಎಂದು ಹೇಳಿದರು.

o o o o

ಸೋವಿಯೆತ್‌ನಾಮೀ ಪ್ರಜಾರಾಜ್ಯದ ಲೇಖಕರು ಕಲಾವಿದರು ಮಾರ್ಕ್ಸ್‌ವಾದ ಮತ್ತು ಲೆನಿನ್‌ವಾದಗಳ ಪ್ರತ್ಯಕ್ಷ ಅಧ್ಯಯನಕ್ಕಾಗಿ ಗ್ರಾಮಾಂತರ ಪ್ರದೇಶಗಳಿಗೂ ಕಾರ್ಖಾನೆಗಳಿಗೂ ಈ ತಿಂಗಳಿನಿಂದ ತೆರಳಿದ್ದಾರೆ. ಅವರು ರೈತ ಕಾರ್ಮಿಕರೊಂದಿಗೆ ಪ್ರತ್ಯಕ್ಷ ದುಡಿಯುತ್ತ ಅನುಭವ ಪಡೆಯಬೇಕೆಂಬ ಅಭಿಪ್ರಾಯದವರಾಗಿದ್ದಾರೆ.

300ಜನ ನಟನಟಿಯರು ಹಳ್ಳಿಗಾಡುಗಳಿಗೂ ಉದ್ಯೋಗಿಕ ಕ್ಷೇತ್ರಗಳಿಗೂ ಈಗಾಗಲೇ ತೆರಳಿದ್ದಾರೆ. 60 ಜನ ಬರೆಹಗಾರರು, ಚಿತ್ರ ಕಲಾವಿದರು, ನಾಟಕಕಾರರು ಈ ತಿಂಗಳ ಮಧ್ಯದಲ್ಲಿ ತೆರಳುತ್ತಾರೆ. ಹಳ್ಳಿಗಾಡುಗಳಿಗೆ ತೆರಳಲಾರದವರು ನಗರದ ಕಾರ್ಖಾನೆಗಳಿಗೆ ಹೋಗುವರು.

o o o o

ಚೀನಾದ 13ನೇ ಶತಮಾನದ ಪ್ರಸಿದ್ಧ ನಾಟಕಕಾರ ಕುಅನ್ ಹ್ಯಾನ್‌ಚಿಂಗ್ ಅವರ ಏಳನೇ ಶತಮಾನದ ಸ್ಮರಣಾರ್ಥವಾಗಿ ಚೀನಾದ 15,000 ನಾಟಕ ಕಂಪೆನಿಗಳು ಬಗೆಬಗೆಯ ನಾಟಕಗಳನ್ನು ದೇಶಾದ್ಯಂತ ಏರ್ಪಡಿಸಿದ್ದವು. ಇದಕ್ಕೆ ಸಂಬಂಧಿಸಿ ವ್ಯಾಸಂಗ ಹಾಗೂ ವಿಚಾರ ಗೋಷ್ಠಿಗಳನ್ನು ಏರ್ಪಡಿಸಲಾಗಿತ್ತು.

o o o o

ಅಮೇರಿಕೆಯಿಂದ ರಾಷ್ಟ್ರೀಯ ಸ್ವಾತಂತ್ರ್ಯ ಪಡೆಯುವದು, ಉದ್ಯೋಗ ಮತ್ತು ಪ್ರಪಂಚ ಶಾಂತಿಗಾಗಿ 10,000 ಮಹಾ ಜನರ ಭಾರೀ ಪ್ರದರ್ಶನವೊಂದು ಲಂಡನಿನಲ್ಲಿ ಜೂನ್ 29ರಂದು ನಡೆಯಿತು. ಬ್ರಿಟಿಷ್ ಕಮ್ಯೂನಿಸ್ಟ್ ಪಕ್ಷದ ಕರೆಗೆ ಓಗೊಟ್ಟು ಇಂಗ್ಲಂಡಿನ ಬೇರೆ ಬೇರೆ ಭಾಗಗಳಿಂದ ಜನರು ಆಗಮಿಸಿದ್ದರು. ನಾಯಕರಾದ ಹ್ಯಾರಿಪಾಲಿಟ್ ಮತ್ತು ಜಾನ್ ಗೋಲ್ಡನ್ ಅವರುಗಳು ನೇತೃತ್ವ ವಹಿಸಿದ್ದರು.

o o o o

ಬರ್ಲಿನ್‌ನಲ್ಲಿ ಜೂನ್ 27ರಿಂದ 29ರವರೆಗೆ 15 ಕಮ್ಯೂನಿಸ್ಟ್ ರಾಷ್ಟ್ರಗಳ ಪ್ರತಿನಿಧಿಗಳ ಮಹಾಸಭೆಯೊಂದು ನಡೆದು ಕಾರ್ಮಿಕ ಐಕ್ಯತೆ, ಕಮ್ಯೂನಿಸ್ಟ್ ಪಕ್ಷಗಳ ಐಕ್ಯತೆಗಳನ್ನು ಘೋಷಿಸಲಾಯಿತಲ್ಲದೆ ಪಶ್ಚಿಮ ಜರ್ಮನಿಗೆ ಅಮೇರಿಕೆಯು ನೀಡುತ್ತಿರುವ ಅಣುಸಹಾಯವನ್ನೂ ಆಕ್ರಮಣ ನೀತಿಯನ್ನೂ ಬಲವಾಗಿ ಖಂಡಿಸಲಾಯಿತು.

o o o o

ಜೂಲೈ ಮೊದಲನೆಯ ತಾರೀಖಿನಂದು ಚೀಣಾದಲ್ಲಿ ಕಮ್ಯೂನಿಸ್ಟ್ ಘೋಷಣೆಯ 100ನೆಯ ಶತಮಾನೋತ್ಸವದ ಸ್ಮಾರಕವಾಗಿ ಅಂಚೆ ಟಿಕೇಟುಗಳನ್ನು ಬಿಡುಗಡೆ ಮಾಡಲಾಯಿತು. ಇವು ಎರಡು ಬಗೆಯ ಸ್ಟಾಂಪುಗಳಾಗಿದ್ದು 4 ಸೆಂಟಿನವು ಮತ್ತು 8 ಸೆಂಟಿನವು ಇದ್ದು ಇವುಗಳ ವರ್ಣಗಳೂ ಬೇರೆ ಬೇರೆಯಾಗಿವೆ.

ಒಂದರಲ್ಲಿ ಮಾರ್ಕ್ಸ್ ಮತ್ತು ಎಂಗೆಲ್ಸ್‌ರ ಚಿತ್ರಗಳೂ ಇದ್ದು ಮೊದಲ ಮುದ್ರಣದ ಚಿತ್ರವೂ ಇದೆ.

ಎರಡನೆಯದರಲ್ಲಿ 1848ರಲ್ಲಾದ ಪ್ರಥಮ ಜರ್ಮನ್ ಮುದ್ರಣದ ಚಿತ್ರವೂ ಮಾನವ ಕುಲಕ್ಕೆ ಶಾಂತಿ–ಸುಖಗಳನ್ನು ತಂದುದರ ಸಂಕೇತವಾಗಿರುವ ಪೀನಿ ಪುಷ್ಪಗಳೂ ಇವೆ.

o o o o

ಜೂಲೈ 31ರಂದು ಚೀನಾದಲ್ಲಿ ಕಮ್ಯೂನಿಸ್ಟ್ ಪಕ್ಷದ ಜನ್ಮದಿನೋತ್ಸವವು ಸಂಭ್ರಮದಿಂದ ನಡೆಯಿತು.

o o o o

ಪಾಕಿಸ್ಥಾನಕ್ಕೆ ಹೊಂದಿರುವ ಭಾರತದ ರಾಜಸ್ಥಾನದ ಗಡಿಪ್ರದೇಶದಲ್ಲಿ ಕಳ್ಳಸಾಗಾಣಿಕೆಯ ವಿರೋಧವಾಗಿ ಕೈಕೊಂಡ ಕಾರ್ಯಾಚರಣೆಯ ಫಲವಾಗಿ ಜನವರಿ 1957ರಿಂದ ಏಪ್ರಿಲ್ 1958ರ ವರೆಗಿನ ಅವಧಿಯಲ್ಲಿ ಒಟ್ಟು 8,500 ತೊಲ ಚಿನ್ನವನ್ನು ವಶಪಡಿಸಿಕೊಳ್ಳಲಾಗಿದೆ.

ಈ ಕಾರ್ಯಾಚರಣೆಯನ್ನು ನಡೆಸಿದವರು ರಾಜಾಸ್ಥಾನದ ಸಶಸ್ತ್ರ ಪೋಲೀಸ್ ಪಡೆಯವರು.

ಕಮ್ಯೂನಿಸ್ಟ್ ಪಾರ್ಟಿ ಅಂತರ್ಯುದ್ಧವನ್ನು ಪ್ರಚೋದಿಸದು

★ ಕೇರಳ ಶಾಸನ ಸಭೆಯಲ್ಲಿ ಇ. ಎಂ. ಎಸ್. ಸ್ಪಷ್ಟನೆ ! ★

ಕೇರಳದ ಮುಖ್ಯ ಮಂತ್ರಿ ಇ. ಎಂ. ಎಸ್. ನಂಬೂದ್ರಿಪಾದ್‌ರವರು ಇತ್ತೀಚಿಗೆ ಕೊಯಮತ್ತೂರು, ಕೂನೂರು ಮತ್ತು ಕೊಟ್ಟಾಯಂಗಳಲ್ಲಿ ಮಾಡಿದ ಭಾಷಣವನ್ನು ಕಮ್ಯೂನಿಸ್ಟರು ಅಂತರ್ಯುದ್ಧದ ಪರಿಸ್ಥಿತಿಯನ್ನುಂಟುಮಾಡುವ ಹೆದರಿಕೆ ಹಾಕಿದ್ದಾರೆ ಎನ್ನುವ ಅರ್ಥಮಾಡಿ ವಿರೋಧಿಗಳು ಬೇಕಾದಷ್ಟು ಪ್ರಚಾರ ನಡೆಸಿದ್ದಾರೆ. ಪಂಡಿತ್ ನೆಹರೂರವರಿಂದ ಹಿಡಿದು ಎಲ್ಲ ಕಾಂಗ್ರೆಸ್ ನಾಯಕರುಗಳು, ಇತರ ಪಕ್ಷಗಳವರೂ ದೊಡ್ಡ ಅವಾಂತರವನ್ನೇ ಎಬ್ಬಿಸಿದ್ದಾರೆ.

ಮುಖ್ಯ ಮಂತ್ರಿಗಳ ಈ ಭಾಷಣದ ಬಗ್ಗೆ ಕೇರಳ ಶಾಸನ ಸಭೆಯಲ್ಲಿ ನಡೆದ ಅರ್ಧ ಗಂಟೆಯ ಚರ್ಚೆಗೆ ಉತ್ತರವೀಯುತ್ತ ಇ. ಎಂ. ಎಸ್. ರವರು ಸ್ಪಷ್ಟನೆ ನೀಡುತ್ತ, ತಾವು ಅಂಥ ಅರ್ಥ ಬರುವಂತೆ ಹೇಳಲಿಲ್ಲವೆಂದೂ, ಕೇರಳದಲ್ಲಿ ಪ್ರಸಕ್ತದಲ್ಲಿರುವ ಕಮ್ಯೂನಿಸ್ಟ್ ವಿರೋಧಿ ವಾತಾವರಣವು ಚೀನಾದಲ್ಲಿ ಆದಂಥ ಪರಿಸ್ಥಿತಿಗೆ ಎಡೆಕೊಡಬಹುದೆಂದಷ್ಟೇ ಹೇಳಿದ್ದೇ ಹೊರತಾಗಿ, ಕಮ್ಯೂನಿಸ್ಟ್ ಪಾರ್ಟಿಯು "ಚೀನಾಮಾರ್ಗ" ಅನುಸರಿಸುವದು ಎಂದಲ್ಲ ಎಂದು ತಿಳಿಸಿದ್ದಾರೆ.

ಇ. ಎಂ. ಎಸ್. ರವರ ಭಾಷಣದ ಮುಖ್ಯಾಂಶಗಳು ಈ ರೀತಿ ಇವೆ. ಕಮ್ಯೂನಿಸ್ಟ್ ಪಾರ್ಟಿಯು ರಾಜ್ಯದಲ್ಲಿ ಅಂತರ್ಯುದ್ಧದ ಸ್ಥಿತಿಗತಿಗಳನ್ನುಂಟುಮಾಡಲು ಯತ್ನಿಸುತ್ತಿರುವುದಾಗಿ ಹೇಳಲಾಗಿದೆ, ಆದರೆ ಅದಕ್ಕೆ ಬದಲಾಗಿ ಕಮ್ಯೂನಿಸ್ಟ್ ಪಾರ್ಟಿಯು ಅಂಥ ಸಂಭವವನ್ನು ತಡೆಯಲು ಎಲ್ಲ ರೀತಿಯಲ್ಲೂ ಯತ್ನಿಸುತ್ತದೆ. ರಾಷ್ಟ್ರದ ಗುರಿಯನ್ನು ಸಾಧಿಸಲು ರಾಷ್ಟ್ರೀಯ ಐಕ್ಯತೆ ಆಗತ್ಯವಾಗಿದೆ, ಆ ಗುರಿಯನ್ನು ಸಾಧಿಸಲು ಕಮ್ಯೂನಿಸ್ಟ್ ಪಾರ್ಟಿಯು ತನ್ನ ಧೋರಣೆಯನ್ನು ಅನುಸರಿಸುತ್ತಿದೆ, ಇತರ ಪಕ್ಷಗಳು ಅದೇ ನೀತಿಯನ್ನು ಅನುಸರಿಸಿದಲ್ಲಿ ಒಳ್ಳೆಯದು. ಆದರೆ ದುರದೃಷ್ಟವಶಾತ್ ಕೇರಳದಲ್ಲಿ ವಿರೋಧ ಪಕ್ಷಗಳು ಹಾಗೆ ಮಾಡುತ್ತಿಲ್ಲ.

ಒಂದು ಕಾರ್ಯಕ್ರಮದ ಮೇಲೆ ಸಂಯುಕ್ತರಂಗ ಆಗುವುದನ್ನು ನಾನು ನೋಡಿದ್ದೇನೆ. ಆದರೆ ಕೇರಳದಲ್ಲಿ ಹಾಗಿಲ್ಲ, ಒಂದು ಪಕ್ಷದ ವಿರೋಧವಾಗಿ ಐಕ್ಯರಂಗ ರಚಿಸಲಾಗಿದೆ, ಅದು ನನ್ನ ಅಭಿಪ್ರಾಯದಲ್ಲಿ ಅಪಾಯಕಾರಿಯಾದದ್ದು.

ನನ್ನ ಭಾಷಣದಲ್ಲಿ ಅಂತರ್ಯುದ್ಧದ ಸ್ಥಿತಿ ಉಂಟುಮಾಡುವ ಭೀತಿಇದೆ ಎಂದು ಹೇಳುವವರು, ವಿರೋಧ ಪಕ್ಷದ ನಾಯಕರು ಮತ್ತು ಇತರ ಕಾಂಗ್ರೆಸು ನಾಯಕರುಗಳು, ಆತ್ಮ ರಕ್ಷಣೆಗಾಗಿ ಜನರು ತಾವು ಸಂಘಟಿತರಾಗಬೇಕು ಎಂದು ಹೇಳುತ್ತಿರುವುದರ ಬಗ್ಗೆ ಆಕ್ಷೇಪವೇಕೆ ಎತ್ತಿಲ್ಲ. "ನಂಬೂದ್ರಿಪಾದರೆ ನಿಮ್ಮ ಜೀವ ರಕ್ಷಿಸಿಕೊಳ್ಳಿರಿ" ಎಂಬ ಘೋಷಣೆಗಳನ್ನು ನಾವು ಕೇಳಿದ್ದೇವೆ. ಇಂಥ ಘೋಷಣೆಗಳು ಆತ್ಮ ರಕ್ಷಣೆಯ ಇಲ್ಲ ಶಾಂತಿಯುತ ಸಾಧನಗಳ ಮಾರ್ಗವೇ, ಇದಕ್ಕೆ ವಿರೋಧ ಪಕ್ಷದವರೇ ಉತ್ತರ ಹೇಳಲಿ.

ನನ್ನ ಭಾಷಣದಲ್ಲಿ ಅಂತರ್ಯುದ್ಧ ಭೀತಿ ಹುಟ್ಟಿಸುವಂಥ ಅಂಶವೇನಿಲ್ಲ, ಇದನ್ನು ವಿರೋಧ ಪಕ್ಷದವರು ತಾಳ್ಮೆಯಿಂದ ಕೂಲಂಕುಶವಾಗಿ ಪರಿಶೀಲಿಸಲಿ ಎಂದು ತಿಳಿಸಿದರು.

——

ಸ್ಟಾಕ್‌ಹೋಂ ಅಧಿವೇಶನಕ್ಕೆ ಬೆಂಗಳೂರಿನ ಪ್ರತಿನಿಧಿಗಳು

ಸ್ಟಾಕ್ ಹೋಮ್‌ನಲ್ಲಿ ಇದೇ 16ನೆಯ ತಾರೀಖಿನಿಂದ 22ನೇ ತಾರೀಖಿನವರೆಗೆ ನಡೆಯಲಿರುವ ಅಂತರರಾಷ್ಟ್ರೀಯ ಸಹಕಾರ ಮತ್ತು ನಿರಾಯುಧೀಕರಣಕ್ಕೆ ಒತ್ತಾಯ ಹಾಕುವ ಶಾಂತಿ-ಮಹಾಸಮ್ಮೇಲನಕ್ಕೆ ಬೆಂಗಳೂರು ಶಾಂತಿ–ಸಮಿತಿಯ ಪರವಾಗಿ ಪ್ರತಿನಿಧಿಗಳು ಕಳೆದವಾರ ತೆರಳಿದರು.

ಈ ಪ್ರತಿನಿಧಿಗಳಲ್ಲಿ ಬೆಂಗಳೂರಿನ ಕಾರ್ಪೋರೇಷನ್‌ನಲ್ಲಿ ವಿರೋಧಿ ಪಕ್ಷದ ನಾಯಕರಾದ ಶ್ರೀ ಎನ್. ಆರ್. ಮೂರ್ತಿ, ಮಾಜಿ ಮುಖ್ಯ ಮಂತ್ರಿ ಶ್ರೀ ಕೆ. ಹನುಮಂತಯ್ಯ, ನಗರದ ಸಾಸ್ಕೃತಿಕ ಕಾರ್ಯಗಳಲ್ಲಿ ಪ್ರಮುಖ ಪಾತ್ರವಹಿಸುವ ಶ್ರೀ ಸಿದ್ದರಾಮಣ್ಣ ಮತ್ತು ನಗರದ ಉದ್ಯಮಿಯಾದ ಶ್ರೀ ಚಂದ್ರಣ್ಣ ಅವರುಗಳಿರುವರು.

ಹರಿಹರ—

ಕಿರ್ಲೋಸ್ಕರ್ ಸಂಘದ ವಾರ್ಷಿಕ ಸಭೆ

ಮೈಸೂರು ಕಿರ್ಲೋಸ್ಕರ್ ಕೆಲಸಗಾರರ ಸಂಘದ ಬಹಿರಂಗ ಸಭೆಯು ತಾ. 2–7–58ರಂದು ಸಂಘದ ಉಪಾಧ್ಯಕ್ಷರಾದ ಶ್ರೀ ಎಚ್. ಎಸ್. ರಾಮಚಂದ್ರರಾವ್ ಇವರ ಅಧ್ಯಕ್ಷತೆಯಲ್ಲಿ ಸೇರಿತ್ತು.

1958-59ನೇ ಸಾಲಿಗೆ ಸಂಘದ ಚುನಾವಣೆಯನ್ನು ನಡಿಸಲು 3ಜನರ ಒಂದು ಅಡ್‌ಹಾಕ್ ಕಮಿಟೆಯನ್ನು ರಚಿಸಲಾಯಿತು. 1958-59ನೇ ಸಾಲಿಗೆ ಅಧ್ಯಕ್ಷ ಸ್ಥಾನಕ್ಕೆ ಶ್ರೀ ಎಂ. ಸಿ. ನರಸಿಂಹನ್ ಮತ್ತು ಉಪಾಧ್ಯಕ್ಷ ಸ್ಥಾನಕ್ಕೆ ಶ್ರೀ ಎಚ್. ಎಸ್. ರಾಮಚಂದ್ರರಾವ್ ಇವರುಗಳನ್ನು ಗೌರವ ಸದಸ್ಯರುಗಳನ್ನು ಅವಿರೋಧವಾಗಿ ಆರಿಸಲಾಯಿತು. ಸಭೆಗೆ ಮೊದಲನೆ ಪಾಳಿಯ ಎಲ್ಲ ಕಾರ್ಮಿಕರದ ಬಂದಿದ್ದರು. ಸಂಘದ ಕಾರ್ಯದರ್ಶಿಯವರ ಆಭಾರ ಮನ್ನಣೆಯೊಡನೆ ಸಭೆ ಮುಕ್ತಾಯವಾಯಿತು.

ರಾಜ್ಯದ ರಾಜಕೀಯ ರಂಗ

ಉಪಮಂತ್ರಿಗಳಿಗೊಂದು ಉದ್ಯೋಗ

ರಾಜ್ಯದಲ್ಲಿ ನೇಮಕವಾಗಿರುವ ಆರು ಮಂದಿ ಉಪಮಂತ್ರಿಗಳಿಗೆ ಸಭೆ, ಸಮಾರಂಭಗಳಿಗೆ ಹೋಗುವುದು, ಹೇಳಿಕೆಗಳನ್ನು ಕೊಡುವುದು ಇವಷ್ಟೆ ಉದ್ಯೋಗವಲ್ಲದೆ, ಮುಖ್ಯ ಮಂತ್ರಿ ಜತ್ತಿಯವರು ಅವರಿಗೆ ಹೊಸದೊಂದು ಉದ್ಯೋಗವನ್ನು ಬೇರೆ ಕಲ್ಪಿಸಿಕೊಟ್ಟಿದ್ದಾರೆ. ಅದು ಅರ್ಜಿಗಳನ್ನು ಸ್ವೀಕರಿಸುವುದು.

ರಾಜ್ಯದಲ್ಲಿನ ಹತ್ತೊಂಭತ್ತು ಜಿಲ್ಲೆಗಳನ್ನು ಉಪಮಂತ್ರಿಗಳಿಗೆ ತಲಾ ಮೂರು ಜಿಲ್ಲೆಗಳಂತೆ ಹಂಚಲಾಗಿದೆ. ಸಂಬಂಧಪಟ್ಟ ಜಿಲ್ಲೆಗಳಿಂದ ಬರತಕ್ಕ ಅರ್ಜಿ ಅಹವಾಲುಗಳನ್ನು ಸ್ವೀಕರಿಸಿ ಈ ಉಪ ಮಂತ್ರಿಗಳು ಮಂತ್ರಿವರ್ಯರ ಅವಗಾಹನೆಗೆ ತರುವರು. ಅಂದ ಮೇಲೆ ನೇರವಾಗಿ ಮಂತ್ರಿಗಳನ್ನು ಭೆಟ್ಟಿಯಾಗಿ, ಪ್ರಶ್ನೆಗಳನ್ನು ಪರಿಶೀಲಿಸುವ ಸಂಭವ ದುರ್ಲಭವಾಯಿತು. ಉಪ ಮಂತ್ರಿಗಳು ಅರ್ಜಿಗಳ ಮೇಲೆ ಕ್ರಮ ತೆಗೆದುಕೊಳ್ಳುವಂತಿಲ್ಲ. ಅವನ್ನು ಮಂತ್ರಿಗಳಿಗೆ ತಲುಪಿಸುವ ಅಂಚೆ ಕಛೇರಿ ಅಷ್ಟೆ. ಅಲ್ಲದೆ ಅರ್ಜಿಗಳು ಉಪ ಮಂತ್ರಿಗಳ ಮೇಜಿನ ಮೇಲೆ ಇನ್ನಿಷ್ಟು ಹೆಚ್ಚು ಕಾಲ ಕಳೆಯುತ್ತವೆ ಅಷ್ಟೆ. ಜತ್ತಿಯವರೇನೋ ಇದರಿಂದ ಜನತೆಗೆ ಮಹದುಪಕಾರವಾಗುವುದೆಂದು ಭಾವಿಸಿರಬಹುದು. ಆದರೆ ನಿಜಸ್ಥಿತಿ ಮಾತ್ರ ಬೇರೆಯಾಗಿರುವುದು. ಅರ್ಜಿದಾರನಿಗೆ ಉಪ ಮಂತ್ರಿಗಳನ್ನು ಭೆಟ್ಟಿಯಾಗಿ ಅರ್ಜಿ ಸಲ್ಲಿಸಿದ ತೃಪ್ತಿಯಷ್ಟೇ ದೊರಕುವುದೇ ಹೊರತು ಬೇರೇನೂ ದೊರೆಯುವುದು ಕಷ್ಟ. ಉಪ ಮಂತ್ರಿಗಳು ಈ ಅವಕಾಶವನ್ನು ಜಿಲ್ಲೆಗಳಿಗೆ ಸಂಬಂಧಪಟ್ಟಂತೆ ದುರುಪಯೋಗಪಡಿಸಿಕೊಳ್ಳುವ ಸಂಭವವೂ ಇದೆ ಎಂದು ಎಚ್ಚರಿಸಬೇಕಾಗಿದೆ.

ಇನಾಂ ಗ್ರಾಮಗಳು ಮತ್ತು ಸರಕಾರ

ಹಳೇ ಮೈಸೂರಿನ ಭಾಗದಲ್ಲಿರುವ ಎಲ್ಲ ಇನಾಂ ಗ್ರಾಮಗಳನ್ನು ಸರಕಾರದ ವಶಕ್ಕೆ ಅಕ್ಟೋಬರ್ ೨ ಗಾಂಧಿ ಜಯಂತಿ ದಿನ ತೆಗೆದುಕೊಳ್ಳಲಾಗುವುದೆಂದು ರೆವಿನ್ಯೂ ಸಚಿವ ಕಡಿದಾಳ್ ಮಂಜಪ್ಪನವರು ಘೋಷಿಸಿದ್ದಾರೆ.

ಹಳೆ ಮೈಸೂರಿನಲ್ಲಿ 2,089 ಇನಾಂ ಗ್ರಾಮಗಳಿವೆ. ಕಡಿದಾಳ್ ಮಂಜಪ್ಪನವರು ಹಿಂದೆ ಹಳೆ ಮೈಸೂರಿನ ಸಚಿವರಾಗಿದ್ದಾಗ 1954ರಲ್ಲಿ ಜೋಡಿ–ಇನಾಂ ರದ್ದಿಯಾತಿ ಮಸೂದೆಯನ್ನು ತಂದಿದ್ದರು. ಈ ಮಸೂದೆ ಕಾಯಿದೆಯಾಗಿ ನಾಲ್ಕು ವರ್ಷಗಳಾದ ನಂತರ ಅದನ್ನು ಅಮಲಿಗೆ ತರುವುದಾಗಿ ಮತ್ತೆ ಘೋಷಿಸಲಾಗಿದೆ.

ನಾಲ್ಕು ವರ್ಷಗಳ ನಂತರವಾದರೂ ಸರಕಾರ ಕಣ್ಣು ತೆರೆದು ಕಾಯಿದೆ ಪ್ರಕಾರ ಕ್ರಮ ತೆಗೆದುಕೊಳ್ಳಲು ನಿರ್ಧರಿಸುವುದೇ ದೊಡ್ಡ ವಿಷಯವಾಗಿದೆ.

ಇನ್ನೂ ಸರಕಾರವು ಹಿಂದುಮುಂದು ನೋಡಿಕೊಂಡು, ಅರೆಮನಸ್ಸಿನಿಂದ ತರುವ ಭೂಸುಧಾರಣಾ ಕಾಯಿದೆಯು ಅಮಲಿಗೆ ಎಂದು ಬರುವುದೋ ಸಂದೇಹವಾಗಿದೆ. ಇನಾಂ ರದ್ದಿಯಾತಿ ಮಸೂದೆ ಜಾರಿಗೆ ಬರಲು ಸರಕಾರಕ್ಕೆ ಎಷ್ಟು ವರ್ಷ ಬೇಕಾಗುವುದು ?

ದೊಡ್ಡಬಳ್ಳಾಪುರ—

ಕಾಂಗ್ರೆಸ್ಸಿಗರೇ ನಿಮಗಿನ್ನು ನಮಸ್ಕಾರ !

ತೆಗೆದುಕೊಳ್ಳಿ ನಮ್ಮ ರಾಜೀನಾಮೆ !

ಒಂದು ದಶಕಕ್ಕಿಂತ ಹೆಚ್ಚು ಕಾಲ ಕಾಂಗ್ರೆಸ್‌ನಲ್ಲಿದ್ದು ಸೇವೆ ಸಲ್ಲಿಸಿದ ದೊಡ್ಡಬಳ್ಳಾಪುರದ ಇಬ್ಬರು ಕಾಂಗ್ರೆಸ್ಸಿಗರು ಕಾಂಗ್ರೆಸ್ಸಿನ ದೌರ್ಬಲ್ಯ, ಪಕ್ಷಪಾತ ನೀತಿ, ಕೋಮುವಾರು ಭಾವನೆ, ಜನತೆಯಿಂದ ದೂರವಿರುವ ನೀತಿಯನ್ನು ಖಂಡಿಸಿ ಬೇಸತ್ತು ರಾಜಿನಾಮೆ ಇತ್ತಿದ್ದಾರೆ.

ಶ್ರೀ ಎನ್. ರಾಮಕೃಷ್ಣಯ್ಯ ಮತ್ತು ಎಸ್. ಜಿ. ನಂಜುಂಡೇಶ್ವರಯ್ಯ ಇವರುಗಳು ರಾಜೀನಾಮೆ ಸಲ್ಲಿಸುತ್ತಾ ಹೀಗೆ ಹೇಳಿದ್ದಾರೆ :

- ● ಕಾಂಗ್ರೆಸ್ ಜನರು ಜನರಲ್ಲಿ ಮಿಳಿತರಾಗಿ ಅವರ ಕಷ್ಟಸುಖಗಳಲ್ಲಿ ಭಾಗಿಗಳಾಗಿ ಕೆಲಸ ಮಾಡುವುದು ಕಡಮೆಯಾಗಿದೆ.
- ● ಕೇವಲ ಅಧಿಕಾರಕ್ಕಾಗಿ ಕಚ್ಚಾಟ; ಪರ್ಮಿಟ್ಟುಗಳನ್ನು ಲಪಟಾಯಿಸಿ ದುಡ್ಡು ಗಳಿಸುವುದು.
- ● ಊರುಗಳಲ್ಲಿ ಪಾರ್ಟಿಗಳನ್ನು ಕಟ್ಟಿ ಕೋರ್ಟು ವ್ಯವಹಾರ ಬೆಳೆಸುವುದು, ಕೋಮುವಾರು ಭಾವನೆಗಳನ್ನು ಬೆಳೆಸುವುದು.

ಶ್ರೀ ಎನ್. ರಾಮಕೃಷ್ಣಯ್ಯನವರು ಕಳೆದ ೧೪ ವರುಷಗಳಿಂದ ಕಾಂಗ್ರೆಸ್ಸಿನಲ್ಲಿದ್ದರು. ಶ್ರೀ ನಂಜುಂಡೇಶ್ವರಯ್ಯನವರು ೧೨ ವರುಷಗಳಿಂದ ಕಾಂಗ್ರೆಸ್ಸಿನಲ್ಲಿದ್ದರು.

ಉಡುಪಿ—

ಅಕ್ಕಿಗಾಗಿ ಆಂದೋಳನ

ಉಡುಪಿ ತಾಲ್ಲೂಕು ಕಮ್ಯೂನಿಸ್ಟ್ ಪಾರ್ಟಿಯ ಮಹಾಸಭೆ ಇದೇ ತಾರೀಕು 29—6—58ರಲ್ಲಿ ಶಿರಿಬೀಡಿನಲ್ಲಿ ಜರುಗಿತು. ಅಮೃತಸರದಲ್ಲಿ ನಡೆದ ಭಾರತ ಕಮ್ಯೂನಿಸ್ಟ್ ಪಾರ್ಟಿಯ 4ನೇ ಅಧಿವೇಶನದ ತೀರ್ಮಾನಗಳನ್ನು ವಿವರಿಸಲು ಸಭೆ ಕರೆದುದಾಗಿತ್ತು. ದ. ಕ. ಜಿಲ್ಲಾ ಕಮ್ಯೂನಿಸ್ಟ್ ಪಾರ್ಟಿಯ ಕಾರ್ಯದರ್ಶಿ ಕಾ॥ ಎ. ಕೃಷ್ಣ ಶೆಟ್ಟರು ಅಮೃತಸರ ಅಧಿವೇಶನದ ನಿರ್ಣಯಗಳನ್ನು ಸಭೆಗೆ ವಿವರಿಸಿ ಹೇಳಿದರು. ಅನಂತರ ಸಭೆಯಲ್ಲಿ, ಇಷ್ಟರಲ್ಲೇ ವಿಪರೀತವಾಗಿ ಏರಿರುವ ಅಕ್ಕಿಯ ಬೆಲೆಯನ್ನು ತಡೆಯಲು ಹಾಗೂ ಕಡಿಮೆ ಮಾಡಲು ಸರಕಾರ ಕೂಡಲೇ ಕ್ರಮ ಕೈಗೊಂಡು ಅಲ್ಲಲ್ಲಿ ಅಗ್ಗದರದ ಅಂಗಡಿಗಳನ್ನು ತೆರೆಯಬೇಕೆಂದೂ, ಈ ಬಗ್ಗೆ ಕಮ್ಯೂನಿಸ್ಟ್ ಪಾರ್ಟಿಯು ತಕ್ಕ ಚಳವಳಿಯನ್ನು ನಡೆಸಬೇಕೆಂದೂ ನಿರ್ಧರಿಸುವ, ಮತ್ತು ಜಿಲ್ಲೆಯಾದ್ಯಂತವಿರುವ ಸಾವಿರಾರು ಬೀಡಿ ಮಜೂರರ ಹಿತರಕ್ಷಣಾ ಕಾಯಿದೆ ಹಾಗೂ ಕನಿಷ್ಟ ಮಜೂರಿ ನಿರ್ಣಯಿಸುವಲ್ಲಿ ಮೈಸೂರು ಸರಕಾರ ತೋರಿಸುತ್ತಿರುವ ಅಸಡ್ಡೆ ಮತ್ತು ಪಕ್ಷಪಾತತನದ ಧೋರಣೆಗೆ ತೀವ್ರ ವಿರೋಧ ವ್ಯಕ್ತಪಡಿಸಿ, ಇನ್ನಾದರೂ ಮೈಸೂರು ಸರಕಾರ ವಿಲಂಬ ಮಾಡದೆ ಈ ಬಗ್ಗೆ ತಕ್ಕ ಕ್ರಮ ಕೈಕೊಳ್ಳಬೇಕೆಂದು ಕೇಳಿಕೊಳ್ಳುವ, ಹಾಗೂ ಕಾಂಗ್ರೆಸ್ ಆಡಳಿತೆಯಲ್ಲಿರುವ ದ.ಕ. ಜಿಲ್ಲಾ ಬೋರ್ಡಿನ ಸಾಧಾರಣ 800 ಶಾಲೆಗಳಲ್ಲಿ ದುಡಿಯುವ ಸುಮಾರು 3,000 ಬಡ ಉಪಾಧ್ಯಾಯರುಗಳ ಸಂಬಳವನ್ನು ಕಳೆದ ಏಪ್ರಿಲ್ ತಿಂಗಳಿಂದ ಕೊಡಲಿಲ್ಲವೆಂಬುದನ್ನು ಸಭೆಯು ಖಂಡಿಸಿ, ಜಿಲ್ಲಾ ಬೋರ್ಡು ಆಡಳಿತೆಯಲ್ಲಿರುವ ಈ ತೆರನಾದ ನ್ಯೂನತೆಗಳನ್ನು ಕೂಡಲೇ ಕೊನೆಗಾಣಿಸಿ, ಸಾವಿರಾರು ಉಪಾಧ್ಯಾಯರುಗಳ ಬಾಕಿ ಮಾಡಿಕೊಂಡಿರುವ ಸಂಬಳವನ್ನು ಕೂಡಲೇ ಕೊಡಬೇಕೆಂದು ಜಿಲ್ಲಾ ಬೋರ್ಡನ್ನೂ–ಸರಕಾರವನ್ನೂ ಒತ್ತಾಯಿಸುವ ನಿರ್ಣಯಗಳನ್ನು ಶ್ರೀ ಸಿಂಪ್ಸನ್ ಸೋನ್ಸರು ಸಭೆಯಲ್ಲಿ ಮಂಡಿಸಿದರು. ಸರ್ವಾನುಮತದಿಂದ ಮಂಜೂರಾಯಿತು.

REG. No. M 6867

Edited Printed and Published by C. R. Krishna Rao, at Janashakthi Printers L—59, K. V. Temple St., Sultanpet Bangalore—2 phone: 3810